ಅಧ್ಯಕ್ಷರು: ಪ್ರಸ್ತಾವ ಏನೆಂದರೆ: "1995ನೇ ಸಾಲಿನ ಕರ್ನಾಟಕ ಲೋಕಾಯುಕ್ತ(ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 3ರ ವರೆಗೆ

ಅಧ್ಯಕ್ಷರು : ಖಂಡ 2 ರಿಂದ 3 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 3ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ , ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು.

2. ಕರ್ನಾಟಕ ಸ್ಟಾಂಪುಗಳ (ಎರಡನೆಯ ತಿದ್ದುಪಡಿ)ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಸ್ಟಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಇದರ ಬಗ್ಗೆ ಕೆಲವು ಅಬ್ಜಕ್ಷನ್ಸ್ ರೈಸ್ ಮಾಡಿದ್ದೆವು. ಆವತ್ತೇ ತಮಗೆ ಇದರ ಬಗ್ಗೆ ಕೊಟ್ಟಿದ್ದೇವೆ.

ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಇದರ ಬಗ್ಗೆ ಕೆಲವು ಅಬ್ಜಕ್ಷನ್ಸ್ ರೈಸ್ ಮಾಡಿದ್ದೆವು. ಆವತ್ತೇ ತಮಗೆ ಇದರ ಬಗ್ಗೆ ಕೊಟ್ಟಿದ್ದೇವೆ.

+ ಶ್ರೀ ವೈ ರಾಮಕೃಷ್ಣ (ಆನೇಕಲ್) : ಮಾನ್ಯ ಅಧ್ಯಕ್ಷರೇ, ಇದು ಈಗತಾನೆ ಪಾಸ್ ಮಾಡಿದಂಥ ಬಿಲ್ ರೀತಿಯಲ್ಲಿ ಇವು ಇಲ್ಲ, ಇದೊಂದು ರಾಜಕೀಯ ಕರಾಳ ಶಾಸನ. ಇದನ್ನು ಏತಕ್ಕೆ ಕರಾಳ ಶಾಸನ ಎಂದು ಹೇಳಿದೆ ಎಂದರೆ ಈಗಾಗಲೇ ಈ ಒಂದು ಏಟಂನಲ್ಲಿ ಹೊರೆ ಜಾಸ್ತಿಯಾಗಿದೆ. ಈಗ ತ್ರೈಮಾಸಿಕ ತೆರಿಗೆ 5 ಪರ್‌ಸೆಂಟ್ ಸೆಸ್ ಹಾಕಿದ್ದೀರಿ. ಪ್ರತಿಯೊಂದು ಲೀಟರ್ ಡೀಸಲ್‌ಗೆ 10 ಪೈಸೆ ಹಾಕಿದ್ದೇವೆ. ಟಯರುಗಳ ಮೇಲೆ ತೆರಿಗೆ ಹಾಕಿದ್ದೇವೆ. ಬಿಡಿ ಭಾಗಗಳ ಮೇಲೆ 13 ಪರ್‌ಸೆಂಟ್ ತೆರಿಗೆಯನ್ನು ಹಾಕಿದ್ದೇವೆ. ಹಳೆಯ ವಾಹನಗಳಿಗೆ ಎರಡನೇ ಸಾರಿ ಟ್ರಾನ್ಸ್‌ಫರ್ ಆದಾಗ ಎರಡು ಪರ್‌ಸೆಂಟ್ ಎಂದು ಹಾಕಿದ್ದೀರಿ. ಇದೇನಾಯಿತು ಎಂದರೆ ತೆರಿಗೆ ಹೊರೆ ಭಾರ ಜಾಸ್ತಿಯಾಯಿತು. ಆ ಕಾರಣದಿಂದ ನಮ್ಮದು ಮೊದಲನೇ ವಿರೋಧ ಎರಡನೆಯದಾಗಿ ನೀವು ಹೇಳಬಹುದು. ವಿರೋಧ ಮಾಡಿದರಲ್ಲಾ, ಇದಕ್ಕೆ ಸೂಚಿಸಬಹುದಲ್ಲಾ ಎಂದು ಕೇಳಬಹುದು. ತಾವು ಇದನ್ನು ಈ ರೀತಿ ಮಾಡುವ ಬದಲು ನಾವೇನು ಈಗ ತ್ರೈಮಾಸಿಕ ತೆರಿಗೆ ಏನು ಕೊಡುತ್ತೇವೆ, ಅದನ್ನೇ ಸ್ವಲ್ಪ ಇನ್‌ಕ್ರೀಸ್ ಮಾಡಿದ್ದರೆ ಇಷ್ಟೇ ದುಡ್ಡು ಬಂದು ಬಿಡುವುದು. ಇದನ್ನು ತಾವು ಮರು ಆಲೋಚನೆ ಮಾಡಿ. ಇದಕ್ಕೊಂದು ಬೇರೆ ಆಕ್ಟ್ ತಂದು, ಅಥವ ಇನ್ನೊಂದು ಆಕ್ಟಿನ ಷೆಲ್ಟರ್ ತೆಗೆದುಕೊಂಡು ಇದರಲ್ಲಿ ತಿದ್ದುಪಡಿ ಮಾಡುವ ಬದಲು ತ್ರೈಮಾಸಿಕ ತೆರಿಗೆಯ ಇದೇ ಆಕ್ಟ್‌ನಲ್ಲಿ ನಾವು ತೆರಿಗೆ ಕಟ್ಟುತ್ತಿದ್ದೇವಲ್ಲಾ, ಅದನ್ನು ಸ್ವಲ್ಪ ಇನ್‌ಕ್ರೀಸ್ ಮಾಡಿದ್ದರೆ ಏನು ತೊಂದರೆಯಾಗುತ್ತಿರಲಿಲ್ಲವಲ್ಲಾ ಜನರು ಸಂತೋಷವಾಗಿ ಅದನ್ನು ಕೊಡುತ್ತಿದ್ದರು. ಅದನ್ನು ಬಿಟ್ಟು ಸ್ಟಾಂಪ್ ಆಕ್ಟ್‌ನ ಕೆಳಗಡೆ ತೆಗೆದುಕೊಂಡು ಬಂದು ಅಲ್ಲಿ ಬೇರೆ ಕಷ್ಟ ಪಡಬೇಕು. ತಮಗೆ ಗೊತ್ತಿದೆ ಆರ್ ಟಿ ಓ ಆಫೀಸ್‌ಗಳು ಹೇಗಿವೆ ಎಂದು. ಅಲ್ಲಿ ಬಹುಶಃ ಏಜೆಂಟ್ ಗಳು ಇಲ್ಲದಿದ್ದರೆ ಕೆಲಸ ನಡೆಯುವುದೇ ಇಲ್ಲ. ಆ ಪರಿಸ್ಥಿತಿ ಇರುವಾಗ ಇಲ್ಲಿ ಬರೆ ತೊಂದರೆ ತೆಗೆದುಕೊಳ್ಳಿ. ಸಾರ್ವಜನಿಕರಿಗೆ ಅಂದರೆ ಅದರಿಂದ ಬಹಳ ಕಷ್ಟವಾಗುತ್ತದೆ. ನೀವೇ ಮಂತ್ರಿಗಳಿದ್ದೀರಿ, ತಮಗೆ ಗೊತ್ತಿದೆ. ಇವತ್ತು ಸ್ಟಾಂಪ್ ಪೇಪರ್ ಸಿಗುತ್ತಿದೆಯೇ? ಯಾವ ರೀತಿ ಅಲ್ಲಿಗೆ ನಾವು ಹೋಗುವುದು ತರುವುದು ಹೇಗೆ? ಅದನ್ನು ಯಾವ ರೀತಿ ಮಾಡಬೇಕು? ಅಲ್ಲಿ ಅಲ್ಲೊಂದು ದಿವಸ ವೇಸ್ಟ್ ಆಗುತ್ತದೆ. ಇಲ್ಲೊಂದು ದಿವಸ ವೇಸ್ಟ್ ಆಗುತ್ತದೆ. ಇದನ್ನು ಸಿಂಪ್ಲಿಫೈ ಮಾಡಿ. ಇದನ್ನು ನಾನು ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ನಿಮಗೆ ದುಡ್ಡೂ ಬರುತ್ತದೆ. ಮತ್ತು ತೊಂದರೆಯೂ ಕೂಡ ತಪ್ಪುತ್ತದೆ. ಈ ಬಿಲ್ಲನ್ನು ತಾವು ವಾಪಸ್ ತೆಗೆದುಕೊಂಡು ಟ್ಯಾಕ್ಷೇಷನ್ ಹಣವನ್ನು ಈಗ ಮೂರು ತಿಂಗಳಿಗೆ ಏನು ಕೊಡಬೇಕಾಗಿದೆ ಅದನ್ನು ಸ್ವಲ್ಪ ಜಾಸ್ತಿ ಮಾಡಿದರೆ ನಿಮಗೆ ಸಂಪೂರ್ಣವಾದ ಹಣ ಬರುತ್ತದೆ. ನಾವು ಹೇಳಿದ್ದಕ್ಕೆಲ್ಲಾ ತಾವು ಒತ್ತು ಕೊಟ್ಟಿದ್ದರೆ ಇದನ್ನೂ ಕೂಡ ನಾವು ಸ್ವಾಗತ ಮಾಡಬಹುದಾಗಿತ್ತು. ತಾವು ರಾಜ್ಯಾಂಗದ 246ನೇ ಆರ್ಟಿಕಲ್ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಏಟಂ ನಂ. 35ರಲ್ಲಿ ಅಲ್ಲಿ ಕರೆಕ್ಟಿಗಿ ನಮೂದಿಸಿದ್ದಾರೆ. Mechanically propelled vehicles including the principles on which taxes on such vehicles are to be levied.

ವೆಹಿಕಲ್ಸ್ ಅಲ್ಲ, ವಾಹನಗಳನ್ನು ಕೊಂಡುಕೊಳ್ಳುವುದಾಗಲಿ ವಾಹನಗಳನ್ನು ಮೆಯಿಂಟೈನ್ ಮಾಡುವುದಾಗಲಿ ಅಥವಾ ವಾಹನಗಳನ್ನು ರಿಜಿಸ್ಟ್ರೇಷನ್ ಮಾಡಿಸುವುದಾಗಲಿ ಮತ್ತು ಪ್ರತಿ ತಿಂಗಳಿಗೋ ವರ್ಷಕ್ಕೋ ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್‌ನ್ನು ಕಳುಹಿಸಿ ಚೆಕ್ ಮಾಡುವುದಾಗಲಿ ಅಥವಾ ಅದನ್ನು ಹೈಪಾಥಿಕೇಷನ್ ಮಾರ್ಟಿಗೇಜ್ ಮಾಡುವುದಾಗಲಿ ಅಥವಾ ಸೇಲ್ ಮಾಡುವುದಾಗಿರಲಿ ಅಂದರೆ ಮೊದಲಿಂದ ಹಿಡಿದು

ಕಡೆಯತನಕ ಆ ನೇಮ್ ಬೋರ್ಡ್ ಇರುವ ತನಕ ಆ ಮೋಟಾರ್ ವೆಹಿಕಲ್ಸ್ ರೂಲ್ಸ್ ಕೆಳಗಡೆ ಬರುತ್ತದೆ. ಮತ್ತೆ ಕಾನ್ಸ್‌ಟಿಟ್ಯೂಷನ್‌ನಲ್ಲಿ ಕ್ಲಿಯರ್ ಇರುವಾಗ ನೀವು ಏತಕ್ಕೆ ಸ್ಟಾಂಪ್ ಆಕ್ಟ್ ತರುತ್ತೀರಿ? ನೀವು ನನಗೆ ಹೇಳಬಹುದು ಆದ್ಯಾವುದೋ ರಾಜಸ್ತಾನದಲ್ಲಿ ಮಾಡಿದ್ದಾರೆ ಎಂದು. ನಾನು ಹೇಳುತ್ತಿದ್ದೇನೆ. ಆಕ್ಟ್ ಕ್ಲಿಯರ್ ಆಗಿದೆ. ಇವತ್ತಿನ ದಿವಸ ಎಂಟ್ರಿ ಟ್ಯಾಕ್ಸ್‌ಗೆ ತಾವು ತೆಗೆದುಕೊಂಡು ಹೋಗಿ ಪ್ರೆಸಿಡೆಂಟ್ ಅಸೆಂಟ್ ತೆಗೆದುಕೊಂಡಿವು. ಅದಕ್ಕೋಸ್ಕರ ಇದಕ್ಕೂ ಪ್ರೆಸಿಡೆಂಟ್ ಅಸೆಂಟ್ ದೊರಕಬಹುದು ಎನ್ನುವ ಊಹೆಯ ಮೇಲೆ ತಾವು ಇದನ್ನು ತಂದಿದ್ದೀರಿ ಎಂದು ನನಗನಿಸುತ್ತದೆ, I have got my own doubts as to whether it will get the assent of the President.

ಏಕೆಂದರೆ ನೀವು ಹಾಕಿರುವ ಟ್ಯಾಕ್ಸ್ ನೀವು ಡ್ಯೂಟಿ ಕಲೆಕ್ಟ ಮಾಡುವುದಕ್ಕೆ ಹೋಗುತ್ತಿದ್ದೀರಿ. ಇದೇನು ಎಕ್ಸೈಜ್ ಡ್ಯೂಟಿಯೇ? ಇದೇನು ಇಂಪೋರ್ಟ್ ಡ್ಯೂಟಿಯೇ? ಇಲ್ಲ ಎಕ್ಸ್‌ಪೋರ್ಟ್ ಡ್ಯೂಟಿಯೇ? ಯಾವುದು ಡ್ಯೂಟಿ ಸ್ವಾಮಿ ಇದು. ನೀವು ಹಾಕಿರುವುದು ಟ್ಯಾಕ್ಸ್. ಟ್ಯಾಕ್ಸ್‌ನ್ನು ತೆಗೆದುಕೊಂಡು ಹೋಗಿ ಎರಡು ಪರ್‌ಸೆಂಟ್ ಡ್ಯೂಟಿಯನ್ನು ನಾನು ಕಲೆಕ್ಟ ಮಾಡುತ್ತೇನೆ ಮೋಟಾರ್ ವೆಹಿಕಲ್ ಸ್ಟಾಂಪ್ ಆಕ್ಟ್‌ನಲ್ಲಿ ಎಂದು ಹೇಳಿದರೆ ಇದು ಸಮಂಜಸವಿಲ್ಲ.

ಒಂದಕ್ಕೊಂದು ಸಮಂಜಸವಾಗಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ತಾವು ದಯಮಾಡಿ ಇದರ ಕಡೆ ಮರು ಪರಿಶೀಲನೆ ಮಾಡಿ. ಮೋಟಾರ್ ವೆಹಿಕಲ್ಸ್ ಆಕ್ಟ್‌ನಲ್ಲಿ ಟ್ಯಾಕ್ಸ್ ತೆಗೆದುಕೊಳ್ಳಿ ಎಂದು ನಾನು ಹೇಳುವುದು. I am not coming in the way of your collection of money for your revenue.

ಅಷ್ಟೇ ಹಣ ತೆಗೆದುಕೊಳ್ಳಿ. ಏತಕ್ಕೆ ತೊಂದರೆ? ಓನರ್‌ಗೆ ಸ್ಟಾಂಪ್ ಸಿಗುತ್ತಿಲ್ಲ. ತಾವು ಅದೇ ಖಾತೆಯಲ್ಲಿ ಕೆಲಸ ಮಾಡುತ್ತಿದ್ದೀರಿ. ಪೇಪರ್ ಸಿಗುವುದಿಲ್ಲ. ಅಲ್ಲಿಗೆ ಹೋಗಬೇಕು. ಅಲ್ಲಿಯೂ ಲಂಚ ಕೊಡಬೇಕು. ಅಲ್ಲಿಯೂ ಏಜೆಂಟರನ್ನು ಹಿಡಿಯಬೇಕು. ಇಲ್ಲೊಂದು ದಿವಸ ಕಷ್ಟಪಡಬೇಕು. ಇದ್ಯಾತಕ್ಕೆ ಸ್ವಾಮಿ. ಟ್ಯಾಕ್ಸ್ ಕೊಡುವುದಕ್ಕೆ ಇಷ್ಟೆಲ್ಲಾ ಮಾಡುವ ಬದಲು ಡೈರೆಕ್ಟ್ ಆಗಿ ಟ್ಯಾಕ್ಸ್ ಜಾಸ್ತಿ ಮಾಡಿಕೊಳ್ಳಿ. ಏನು ತೊಂದರೆ ಇದೆ? ಮೂರು ತಿಂಗಳು ತಾವೇನು ಕೊಡಬೇಕೋ ಅದನ್ನೇ ನೂರು ರೂಪಾಯಿ ಜಾಸ್ತಿ ಮಾಡಿದರೆ ಆಯಿತು ಏನಾಗುತ್ತದೆ? ಅದಕ್ಕೋಸ್ಕರ ಇದನ್ನೂ ಮರುಪರಿಶೀಲನೆ ದಯವಿಟ್ಟು ಮಾಡಿ. ನಾನು ಇದನ್ನು ವಿರೋಧ ಮಾಡಬೇಕೆಂದು ವಿರೋಧ ಮಾಡುತ್ತಿಲ್ಲ. ತಾವು ನನ್ನನ್ನು ಅರ್ಥ ಮಾಡಿಕೊಳ್ಳಿ. ಈಗ ಮಾನ್ಯ ಮುಖ್ಯ ಮಂತ್ರಿಗಳು ತಂದಂಥ ಬಿಲ್‌ನ್ನು ನಾವು ಸ್ವಾಗತ ಮಾಡಿದ್ದೇವೆ. ನಿನ್ನೆ ದಿವಸ ವುಮೆನ್ ವೆಲ್‌ಫೆರ್ ಆ ಬಿಲ್ಲನ್ನು ಸಹಾ ಸರ್ವಾನುಮತದಿಂದ ಮಾಡಿದೆವು. ಇದೂ ಕೂಡ ಸರ್ವಾನುಮತದಿಂದ ಆಗುತ್ತದೆ. ನಾನು ಹೇಳುತ್ತಿದ್ದೇನೆ ಕೇಳಿ. We have already committed ourselves ಟ್ಯಾಕ್ಸೇಷನ್ ಹಾಕಬೇಕು. ನಿಜ. ಪಾಪ್ಯುಲರ್ ಸ್ಕೀಮ್ ಇದೆ ನಿಜ. ಆದರೆ ಕಷ್ಟ ಏತಕ್ಕೆ ಕೊಡುತ್ತಿದ್ದೀರಿ? ಅದಕ್ಕೋಸ್ಕರ ನಾನು ಹೇಳುತ್ತೇನೆ. ಮರುಪರಿಶೀಲನೆ ಅಗತ್ಯ. ಒಂದು ವೇಳೆ ತಾವು ಒಪ್ಪುವುದಾದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ. ಒಂದು ವೇಳೆ ಒಪ್ಪಲಿಕ್ಕಾಗಲಿಲ್ಲ ಎಂದರೂ ನೀವೇ ಇದರ ಬಗ್ಗೆ ಆಲೋಚನೆ ಮಾಡಿ ಒಂದು ಆರ್ಡಿನೆನ್ಸನ್ನು ತರುತ್ತೇವೆ ಒಂದು ಭರವಸೆಯನ್ನಾದರೂ ಕೊಡಿ. ಇದು cumbersome affair ಆಗುತ್ತದೆ. ನಾಳೆ ದಿವಸ ಪ್ರೆಸಿಡೆಂಟರಿಂದ ಅಸೆಂಟ್ ಸಿಗುವುದೂ ಕಷ್ಟವಾಗುತ್ತದೆ. Definitely you are laying a bad precedent.

ಇದನ್ನೆಲ್ಲಾ ತಾವು ಮನಸ್ಸಿನಲ್ಲಿಟ್ಟುಕೊಂಡು ಆರ್ಡಿನೆನ್ಸ್ ಆದರೂ ತಂದರೆ ನಮಗೆ ಸಮಾಧಾನವಾಗುತ್ತದೆ. ಇಲ್ಲದಿದ್ದರೆ ಜನರಿಗೆ ಅನಾವಶ್ಯಕವಾಗಿ ಕಷ್ಟ ಕೊಟ್ಟಂತೆ ಆಗುತ್ತದೆ ಎಂದು ನಾನು ತಿಳಿದುಕೊಂಡು ಇದನ್ನು ನಾನು ವಿರೋಧಿಸುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಮಾನ್ಯ ಅಧ್ಯಕ್ಷರೇ, ಇದೊಂದು ಸೆಕೆಂಡ್ ಅಮೆಂಡ್ ಮೆಂಟ್ ಬಿಲ್ ಎಂದು ಸನ್ಮಾನ್ಯ ಕಂದಾಯ ಮಂತ್ರಿಗಳು ಈ ಸದನದಲ್ಲಿ ಏನು ಮಾಡಿಸಿದ್ದಾರೆ, ಇದು ನನ್ನ ಅಭಿಪ್ರಾಯದಲ್ಲಿ ಈ ಸದನದಲ್ಲಿ ಈ ಕಾನೂನನ್ನ ತರುವುಕ್ಕೆ ಅವಕಾಶ ಇಲ್ಲ, ರಾಜ್ಯಾಂಗದಲ್ಲಿ ಇದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ಈ ಸಭೆಯಲ್ಲಿ ತಮ್ಮ ಮೂಲಕ ನಾನು ಅವರಿಗೆ ಹೇಳುತ್ತಿದ್ದೇನೆ. ಈ ಬಿಲ್ಲನ್ನು ಹಾಕಿದಾಗಲೇ ತಮಗೆ ಆಗಲೇ ಅರ್ಜಿ ಕೊಟ್ಟು ಇದನ್ನು ಮಂಡಿಸುವುದಕ್ಕೆ ಬರುವುದಿಲ್ಲ ಎಂದು ಈಗಾಗಲೆ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಮತ್ತು ತಾವು ಕೇಳಿದಿರಿ, ಇದು ಏತಕ್ಕೆ ಕಷ್ಟ ಎಂದು ಕೇಳಬಹುದು. ಏತಕ್ಕೆ ತಾವು ಆ ರೀತಿ ಹೇಳುತ್ತೀರಿ ಎಂದು ಕೇಳಬಹುದು. ಏನು ಕಾರಣದಿಂದ ಇವತ್ತು ತಂದಿದ್ದಾರೆ ಎಂದರೆ ಇದು ಮೋಟಾರ್ ವೆಹಿಕಲ್ಲನ್ನು ರಿಜಿಸ್ಟ್ರೇಷನ್ ಮಾಡುವ ಸಂದರ್ಭದಲ್ಲಿ ರಿಜಿಸ್ಟರ್ ಮಾಡಬೇಕಾದರೆ ಸ್ಟಾಂಪ್ ಡ್ಯೂಟಿ ತರಬೇಕು ಎಂದು ಇದೆ. ಹಿಂಭಾಗಕ್ಕೆ ಸ್ಟಾಂಪ್ ಡ್ಯೂಟಿ ಹಾಕಿ ಎನ್ನುವ ಮಾತು. ತಮಗೆ ಗೊತ್ತಿದೆ. ಸ್ಟಾಂಪ್ ಡ್ಯೂಟಿ ಹಾಕುವುದು ರಿಜಿಸ್ಟಾರ್ ಅಥವಾ ಸಬ್ ರಿಜಿಸ್ಟಾರ್ ಆಫೀಸಿನಲ್ಲಿ ಒಂದು ಇನ್‌ಸ್ಟ್ರುಮೆಂಟ್ ಮಾಡಿದಾಗ ಮಾತ್ರ ಹಾಕಬಹುದು.

ಆವೊತ್ತು ನಾನು ಕೇಳಿದಾಗ ತಾವು ಸದನದಲ್ಲಿ ಹೇಳಿದಿರಿ: ಮಹಾರಾಷ್ಟ್ರದಲ್ಲಿ ಈಗಾಗಲೇ ಮೂವಬಲ್ಸ್ ಎನ್ನುವುದನ್ನು ತಂದಿದ್ದಾರೆ, ಅದಕ್ಕೋಸ್ಕರ ನಾವೂ ಮಾಡುತ್ತಿದ್ದೇವೆ. ಎಂದು ಇಡೀ ಭಾರತದಲ್ಲಿ ಈ ರೀತಿಯ ಕಾನೂನು ಎಲ್ಲಿಯೂ ಕೂಡ ಇಲ್ಲ, ಮೋಟಾರು ವಾಹನಗಳ ಮೇಲೆ ರಿಜಿಸ್ಟ್ರೇಷನ್‌ನಲ್ಲಿ ಈ ತರಹದ ಕಾನೂನು ಎಲ್ಲೂ ಕೂಡ ತಂದಿಲ್ಲ. ಯೂನಿಯನ್ ಲಿಸ್ಟ್‌ನ ಕನ್‌ಕರೆಂಟ್ ಲಿಸ್ಟ್‌ನಲ್ಲಿ 35ನೇ ಸಂಖ್ಯೆ ಬರುತ್ತದೆಂದು ಹೇಳಿದರು. ಆದರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಯೂನಿಯನ್ ಲಿಸ್ಟ್‌ನಲ್ಲಿರುವ 90ರ ಪ್ರಕಾರ Taxes other than Stamp Duty on transaction in Stock Exchanges and future Market.

ಅಂದರೆ, ಸ್ಟ್ಯಾಂಪ್ ಡ್ಯೂಟಿ, ಸ್ಟ್ಯಾಂಪ್ ಛಾರ್ಜಸ್, ಫ್ಯೂಚರ್ ಮಾರ್ಕೆಟ್ ಬಿಟ್ಟು ಉಳಿದ ಎಲ್ಲಾ ವಿಚಾರಗಳು it is only the Union GOvernment, the Parliamentಗೆ ಮಾತ್ರ ಅಧಿಕಾರ ಇರತಕ್ಕಂಥಾದ್ದು. ಎಂಟ್ರಿ ನಂಬರ್ 90ರ ಪ್ರಕಾರ ಯೂನಿಯನ್ ಲಿಸ್ಟ್‌ನಲ್ಲಿ ಬರುವುದು. ಎಂಟ್ರಿ ನಂಬರ್ 91ರ ಪ್ರಕಾರ Rates of Stamp Duty in respect of Bills of Exchange, Cheques, Promissory Notes, Bill of Lading Letter of Credit, Policies of Insurance, Transfer of Shares, Debentures, Proxies and receipts. ಇದೂ ಕೂಡ 91ರಲ್ಲೇ ಬರುವುದು. ನೀವು ಯೂನಿಯನ್ ಲಿಸ್ಟ್ ಸ್ಟೇಟ್ ಲಿಸ್ಟ್‌ನಲ್ಲಿ ಎಂದು ಹೇಳುತ್ತಿದ್ದೀರಿ, ಸ್ಟೇಟ್ ಲಿಸ್ಟ್‌ನಲ್ಲಿ ಇದು ಬರುವುದಿಲ್ಲ. ಅಲ್ಲದೆ, ಸ್ಟೇಟ್ ಲಿಸ್ಟ್‌ನ ಯಾವುದೇ ಎಂಟ್ರಿಯಲ್ಲೂ ಇದು ಬಂದಿಲ್ಲ, ಆದರೆ ಸ್ಟೇಟ್ ಲಿಸ್ಟ್‌ನ 57ನೇ ಎಂಟ್ರಿಯಲ್ಲಿ ಮಾತ್ರ ಇದು ಬರುವುದೆಂಬುದನ್ನು ಗಮನಿಸಬೇಕು. ನಾನು ಹೇಳಬೇಕು. ಯೂನಿಯನ್ ಲಿಸ್ಟ್‌ನಲ್ಲಿ ಬರುವುದು ಮೊದಲನೆಯದು. ಎರಡನೆಯದು, ಸ್ಟೇಟ್ ಲಿಸ್ಟ್‌ನಲ್ಲಿ ಯಾವ ಎಂಟ್ರಿಯಲ್ಲಿ ಹಾಕಬಹುದೆಂದರೆ, ಟ್ಯಾಕ್ಸ್ ಅನ್ ವೆಹಿಕಲ್ಸ ಎಂಟ್ರಿ ನಂಬರ್ 57ನ್ನು ದಯವಿಟ್ಟು ತೆಗೆದು ನೋಡಿ, ಅದು ಬಿಟ್ಟು ಬೇರೆ ಯಾವುದೂ ಇಲ್ಲ. Taxes on vehicles , whether mechanically propelled or not suitable for use on roads, including tramcars subject to the provisions of entry 35 of List III.

57ನೇ ಎಂಟ್ರಿ ಪ್ರಕಾರ ತಾವು ಹಾಕಬೇಕಾದರೆ ಎಂಟ್ರಿ 35, ಲಿಸ್ಟ್ 3ನ್ನು ತಾವು ದಯವಿಟ್ಟು ನೋಡಬೇಕು. ಅನಂತರ ಎಂಟ್ರಿ ನಂಬರ್ 63ನ್ನು ತಾವು

ನೋಡಬೇಕು. ಇದು ಏನು ಹೇಳುತ್ತದೆಂದರೆ, ಸ್ಟೇಟ್ ಲಿಸ್ಟ್‌ನಲ್ಲಿ Rates of stamp duty in respect of documents other than those specified in the provisions of List I with regard to rates of stamp duty.

ಅಂದರೆ, ಅದನ್ನು ಬಿಟ್ಟು ಹಾಕುವುದಕ್ಕೆ ಮಾತ್ರ ಅವಕಾಶವಿದೆ. ಎಂಟ್ರಿ ನಂಬರ್ 90ರಲ್ಲಿ ನೀವು ಹಾಕುವುದಕ್ಕಾಗುವುದಿಲ್ಲ. ಮತ್ತು ಎಂಟ್ರಿ ನಂಬರ್ 35ರ ಕನ್ ಕರೆಂಟ್ ಲಿಸ್ಟ್‌ನಲ್ಲಿ ಹಾಕುತ್ತೇವೆಂದು ಹೋದರೆ, Mechanically propelled vehicles including the principles on which taxes on such vehicles are to be levied. ಇಲ್ಲಿ ಇನ್ನೊಂದು ಎಂಟ್ರಿ ನಂಬರ್ 44 ಬರುವುದನ್ನು ತಾವು ದಯವಿಟ್ಟು ನೋಡಬೇಕು. Stamp duties other than duties or fees collected by means of judicial stamps, but not including rates of stamp duty. ಇದರಲ್ಲೂ ಕೂಡ ತಮಗೆ ಹಾಕಲು ಬರುವುದಿಲ್ಲ. ಸಂವಿಧಾನದ 46ನೇ ತಿದ್ದುಪಡಿಯಾದ ನಂತರ ಅನುಚ್ಛೇದ 286(1)ನ್ನು ನೋಡಬೇಕು. ಇದರ ಪ್ರಕಾರ ಈ ಸದನದಲ್ಲಿ ತೆರಿಗೆಯನ್ನು ಹಾಕುವುದಕ್ಕೆ ನಿಮಗೆ ಅಧಿಕಾರವಿಲ್ಲ. ಅನುಚ್ಛೇದ 286(1)ರಲ್ಲಿ ಸೆಕ್ಷನ್ 3(ಬ)

Any law of State shall, inso far as it imposes or authorises the imposition of a tax on the sale or purchase of goods declared by parliament by law to be of special importance in interstate trade or commerce or a tax on the sale or purchase of goods, being tax of the nature referred to in sub-section clause (b) sub clause (c) or sub clause (d) of clause 29-A of Art 366.

366ನೇ ರಾಜ್ಯಾಂಗದ ಕಲಮಿನ ಪ್ರಕಾರ 29(ಎ)(ಬ)(ಸಿ) ಮತ್ತು (ಡಿ)ಯಲ್ಲಿ ಬಂದರೆ ಅದರ ಪ್ರಕಾರ it is a bar under the constitution.

ರಾಜ್ಯಾಂಗದ 29(ಎ) ಏನು ಹೇಳುತ್ತದೆ ಎನ್ನುವುದನ್ನು ನೋಡಬೇಕು. Tax on transfer of property in goods. Whether as goods or in some form, involved in the execution of works contract.

29(ಬ)ನಲ್ಲಿ ಇದು ಬರುತ್ತದೆ. ಮಹಾರಾಷ್ಟ್ರದಲ್ಲಿ ಮೂವಬಲ್ಸ್‌ನಲ್ಲಿ ಮಾಡಿದ್ದಾರೆಂದು ಏನು ಹೇಳಿದ್ದೀರಿ, ಮೋಟಾರು ವಾಹನಗಳು ಮೂವಬಲ್ಸ್ ಆಗುತ್ತದೆಂದರೆ ಅದು ತಪ್ಪು. ಏಕೆಂದರೆ 29(ಎ) (ಬ)ಯಲ್ಲಿ ಇದು ಸ್ಪಷ್ಟವಾಗಿದೆ. ಆದುದರಿಂದ 286ರ ಪ್ರಕಾರ ಕಾನೂನಿನಲ್ಲಿ ಹಾಕುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಪರೋಕ್ಷವಾಗಿ ಸ್ಟ್ಯಾಂಪ್ ಡ್ಯೂಟಿಯಲ್ಲಿ ಮೋಟಾರು ವಾಹನಗಳಿಗೆ ಟ್ಯಾಕ್ಸ್ ಹಾಕುತ್ತೇವೆಂದರೆ ಇದು ಕೋರ್ಟಿನಲ್ಲಿ ನಿಲ್ಲತಕ್ಕಂಥಾದ್ದಲ್ಲ. ಕನ್ ಕರೆಂಟ್ ಲಿಸ್ಟ್‌ನಲ್ಲೂ ಕೂಡ ಇದಕ್ಕೆ ಪ್ರೆಸಿಡೆಂಟ ಅಸೆಂಟ್ ಬೇಕಾಗುತ್ತದೆ. ಪ್ರೆಸಿಡೆಂಟ್ ಅಸೆಂಟ್ ಖಂಡಿತವಾಗಿಯೂ ಇಲ್ಲದಿರುವಂಥ ಇದಕ್ಕೆ ನಿಮಗೆ ಅಧಿಕಾರ ಕೊಡುವುದಿಲ್ಲ. ದಯವಿಟ್ಟು ಇದನ್ನು ಪುನರ್ ಪರ್ಯಾಲೋಚಿಸಿ, ಬೇಕಾದರೆ ಕಾನೂನು ತಜ್ಞರನ್ನೇ ಕೇಳಿ ಇದನ್ನು ಮಾಡಬೇಕಾಗುತ್ತದೆ. ಎಂಟ್ರಿ ಟ್ಯಾಕ್ಸ್‌ನಲ್ಲಿ ಮಹಾರಾಷ್ಟ್ರದಲ್ಲಿ ಮಾಡಿದರು,

ನಾವು ಕಣ್ಮುಚ್ಚಿಕೊಂಡು ಮಾಡಿಬಿಟ್ಟಿವು, ಆಗ ಯಾರೂ ಕೂಡ ತಮ್ಮ ಗಮನಕ್ಕೆ ಕಾನೂನನ್ನು ತರದೇ ಇದ್ದಂಥ ಸಂದರ್ಭದಲ್ಲಿ ಹಾಗಾಗಿರಬಹುದು ಅಥವಾ ರಾಷ್ಟ್ರಾಧ್ಯಕ್ಷರ ಗಮನಕ್ಕೆ ಇದನ್ನು ಯಾರೂ ತರದಿರುವ ಸಂದರ್ಭದಲ್ಲಾಗಿರಬಹುದು. ಆದರೆ, ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಜ್ಯಾಂಗದಲ್ಲಿ ಇದಕ್ಕೆ ಅವಕಾಶವಿಲ್ಲದಿರುವ ಸಂದರ್ಭದಲ್ಲಿ ಈ ಕಾನೂನನ್ನು ನೀವು ತರುವುದಕ್ಕೆ ಅವಕಾಶವಿಲ್ಲ. ಆ ರೀತಿ ತರದಿರುವ ಸಂದರ್ಭದಲ್ಲೂ ಕೂಡ ಇಧರ ತಿದ್ದುಪಡಿಯನ್ನು ಕೂಡ ತರದೇ ಬಿಲ್

ಪಾಸಾಗದಿದ್ದರೂ ಈಗಾಗಲೇ ತಾವು ಆದೇಶ ನೀಡಿ ರಿಜಿಸ್ಟ್ರೇಷನ್ ಆಫೀಸರ್ ಮೂಲಕ ಸ್ಟ್ಯಾಂಪ್ ಡ್ಯೂಟಿ ಕೊಡದೆ ರಿಜಿಸ್ಟ್ರೇಷನ್ ಆಗುವುದಿಲ್ಲವೆಂದು ಮಾಡಿರುವುದು ಅಕ್ರಮವಾಗಿದೆ, ಹಣವನ್ನು ಅವರ ಹತ್ತಿರ ಸಂಗ್ರಹಿಸದಿದ್ದರೂ ಕೂಡ ಅಕ್ರಮವಾಗಿ ಸಂಗ್ರಹಿಸುವುದಕ್ಕೆ ಕೂಡ ತಮಗೆ ಅಧಿಕಾರ ಇಲ್ಲ, ಯಾರು ಅಧಿಕಾರ ಕೊಟ್ಟರು ಮತ್ತು ಯಾರು ಆ ರೀತಿಯ ಆದೇಶ ಕೊಟ್ಟರು ಎಂಬುದು ನನಗರ್ಥವಾಗುತ್ತಿಲ್ಲ, ಯಾವುದೇ ಹಣವನ್ನು ವಸೂಲು ಮಾಡದಿದ್ದರೂ ಬಹಳ ಅನ್ಯಾಯವಾಗಿದೆ. ಮೋಟಾರು ವಾಹನಗಳ ಸೆಕೆಂಡ್ ಸೇಲ್‌ಗೆ ಸಂಬಂಧಿಸಿದಂತೆ ಏನು ಕಾನೂನನ್ನು ನಮ್ಮ ಮುಂದೆ ತಂದಿದ್ದೀರಿ, ಇದು ರಾಜ್ಯಾಂಗವಾಗಿ ಊರ್ಜಿತವಾಗತಕ್ಕದ್ದಲ್ಲ, It will be challenged before any Court of law. ಆದುದರಿಂದ, ದಯಮಾಡಿ ಇದನ್ನು ಮಾಡಿ. ಈ ಸದನದಲ್ಲಿ ಕಾನೂನು ಗೊತ್ತಿಲ್ಲದವರು ಇದನ್ನು ಅಂಗೀಕರಿಸಿದ್ದಾರೆಂಬ ಅರ್ಥ ಬರಬಾರದು. ಆದುದರಿಂದ, ದಯವಿಟ್ಟು ಇದನ್ನು ಮುಂದಕ್ಕೆ ಹಾಕಬೇಕು, ಈ ವಿಚಾರ ತೆಗೆದುಕೊಳ್ಳಬೇಡಿ, ಇದನ್ನು ಪರಿಶೀಲಿಸಿ. ಈ ಸಂದರ್ಭದಲ್ಲಿ ಇದನ್ನು ಮುಂದಕ್ಕೆ ಹಾಕಬೇಕು. ಈ ವಿಚಾರ ತೆಗೆದುಕೊಳ್ಳಬೇಡಿ, ಇದನ್ನು ಪರಿಶೀಲಿಸಿ. ಈ ಸಂದರ್ಭದಲ್ಲಿ ಇದನ್ನು ತಂದು ಅಂಗೀಕರಿಸುವುದಕ್ಕೆ ಏನು ಇಟ್ಟಿದ್ದೀರಿ, ಇದನ್ನು ವಿರೋಧ ಮಾಡುತ್ತಿದ್ದೇನೆ, ಇದರ ಬಗ್ಗೆ ನನ್ನ ವಿರೋಧವನ್ನು ಈಗಾಗಲೇ ಹೇಳಿದ್ದೇನೆ. ಆದುದರಿಂದ, ತಾವು ಏನು ತಂದಿದ್ದೀರಿ, ಇದು ಊರ್ಜಿತವಾಗತಕ್ಕದ್ದಲ್ಲವೆಂಬ ವಿಷಯವನ್ನು ಈ ಸದನದ ಮೂಲಕ, ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. 'ನಮಗೆ ಬಹುಮತವಿದೆ, ನಾವು ಏನು ಬೇಕಾದರೂ ಮಾಡುತ್ತೇವೆ, ಕೈಯೆತ್ತಿ ಯಾವುದೇ ಕಾನೂನು ಬೇಕಾದರೆ ಅಂಗೀಕರಿಸುತ್ತೇವೆ' ಎಂದು ಹೇಳಬಹುದು. ಹಾಗೆ ಮಾಡುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ, ಈ ವಿಷಯ ಕೋರ್ಟಿಗೆ ಹೋದಾಗ ನಗೆಪಾಟಲಿಗೀಡಾಗಬಾರದು ಮತ್ತು ಕರ್ನಾಟಕದಲ್ಲೇ ವಕೀಲರಿದ್ದಾರೆಯೇ ಈ ಸದನದಲ್ಲೇನಾದರೂ ವಕೀಲರಾದವರೇನಾದರೂ ಇದ್ದಾರೆಯೇ ಎನ್ನಬಾರದು. ಇದರ ಬಗ್ಗೆ ತಮ್ಮ ಗಮನಕ್ಕೆ ಬಿಟ್ಟಿದ್ದೇನೆ. It will be not only a reflection on the majority of the House but it will be a reflection on the House. ಆದುದರಿಂದ, ಇದನ್ನು ಏನು ನೀವು ಅಂಗೀಕರಿಸುತ್ತಿದ್ದೀರಿ, ದಯವಿಟ್ಟು ಇದನ್ನೂ ಕೂಡ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸರ್ಕಾರ ಮೋಟಾರು ವಾಹನಗಳ ಕಾಯಿದೆಗೆ ತಿದ್ದುಪಡಿ ತಂದಿರುವುದನ್ನು ನಾನು ವಿರೋಧಿಸುತ್ತಾ, ಇತ್ತೀಚೆಗೆ ಕರ್ನಾಟಕ ರಾಜ್ಯದ ಬಜೆಟ್ ಮಂಡಿಸಿದ ನಂತರ ಅನೇಕ ವಾಹನಗಳ ಮೇಲೆ ತೆರಿಗೆ ಹೆಚ್ಚಿಸಿರುವುದನ್ನು ನೋಡಿದರೆ, ಉದಾಹರಣೆಗೆ, ಇವೊತ್ತು ಟೈರ್, ಡೀಸೆಲ್, ಮತ್ತು ಎಲ್ಲಾ ಸ್ಪೇರ್ ಪಾರ್ಟ್ಸ್‌ಗೆ ಬೆಲೆ ಏರಿಸಿದ್ದಾರೆ. ವಾಹನಗಳನ್ನು ನಾವು ಖರೀದಿಸುವಾಗ ಸೇಲ್ಸ್ ಟ್ಯಾಕ್ಸ್ ಕೊಟ್ಟು ಖರೀದಿಸಿರುತ್ತೇವೆ. ಇದರಿಂದ ಇವೊತ್ತು ಅನೇಕ ಖಾಸಗಿ ವಾಹನಗಳ ಮಾಲೀಕರಿಗೆ ಬಹಳಷ್ಟು ತೊಂದರೆಯಾಗುತ್ತದೆಲ್ಲದೆ, ಮ್ಯಾಕ್ಸಿ ಕ್ಯಾಬ್‌ಗೆ 3,000 ರೂಪಾಯಿಗಳಿದ್ದುದು, 8,000 ರೂಪಾಯಿಗಳವರೆಗೆ ಟ್ಯಾಕ್ಸ್ ಏರಿಸಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರುವ ನಿರುದ್ಯೋಗಿಗಳು ಆ ಒಂದು ಉದ್ಯೋಗದಲ್ಲಿ ತೊಡಗಿ ಇವೊತ್ತು ಊಟ ಮಾಡಿಕೊಳ್ಳಬಹುದೆನ್ನುವ ಸ್ಥಿತಿಯಲ್ಲಿರುವುದರಿಂದ, ಈ ರೀತಿ ಸರ್ಕಾರ ದರಗಳನ್ನು ಹೆಚ್ಚಿಸಿದ್ದರಿಂದ ಇದರ ವಿರುದ್ಧ ಚಳುವಳಿ ಕೂಡ ನಡೆಸುತ್ತಿದ್ದಾರೆ ವಿಷಯ ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿರಬಹುದು. ಈ ಕಾನೂನು ಮುಖಾಂತರ ವಿಶೇಷವಾಗಿ ಆ ವಾಹನಗಳಿಗೆ ಸಂಬಂಧಿಸಿದಂತೆ ಕಾಯ್ದೆಯನ್ನೇ ಸಂಪೂರ್ಣವಾಗಿ ತಿದ್ದುಪಡಿ ಮಾಡಿದ್ದೇ ಆದರೆ ಸೂಕತವಾಗುವುದಿಲ್ಲ, ಕಾರಣ, ಸರ್ಕಾರ ಇದನ್ನು ಅವಸರದಲ್ಲಿ ಮಂಡಿಸಿವೆ. ಇವೊತ್ತು ಆರ್.ಟಿ.ಓ. ಕಛೇರಿಯಿಂದ ಒಂದು ವಾಹನ ನೋಂದಣಿಯಾಗಿ ಮನೆಗೆ ಬರಬೇಕೆಂದರೆ, ವಿದ್ಯಾವಂತರಾದವರು ಅಲ್ಲಿ ಹೋದರೂ ಕೂಡ ಅಲ್ಲಿರುವ

ಭ್ರಷ್ಟಾಚಾರದಿಂದ ತೀರಾ ಬೇಸರಪಟ್ಟುಕೊಳ್ಳುತ್ತಾರೆ. ಇಡೀ ರಾಜ್ಯದಲ್ಲಿರುವ ಎಲ್ಲಾ ಇಲಾಖೆಗಳಲ್ಲಿರುವ ಭ್ರಷ್ಟಾಚಾರಕ್ಕಿಂತ ಹೆಚ್ಚು ಭ್ರಷ್ಟಾಚಾರ ಆರ್.ಟಿ.ಓ.ನಲ್ಲಿದೆಯೆಂದು ಹೇಳಿದರೆ ತಪ್ಪಾಗಲಾರದು. ಇವೊತ್ತು ವಾಹನಗಳ ಮಾಲೀಕರಿಗೆ, ನಿರುದ್ಯೋಗಿಗಳಾದವರಿಗೆ ಮತ್ತು ಸಂಪೂರ್ಣವಾಗಿ ಅದರ ಮೇಲೆಯೇ ಅವಲಂಬಿತರಾದವರಿಗೆ ಇಂತಹ ಕಾನೂನು ತಂದು ಮತ್ತೆ ಅವರ ದಿನನಿತ್ಯದ ವ್ಯವಹಾರ ಜೀವನಕ್ಕೆ ಅಡ್ಡಾದಿಡ್ಡಿಯಾಗುವುದು ಸೂಕ್ತವಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದರ ಬಗ್ಗೆ ಬೇರೆ ಎಲ್ಲಾ ಹಿರಿಯ ಸದಸ್ಯರು ಹೇಳಿದ್ದಾರೆ. ಈ ಕುರಿತು ಸರ್ಕಾರ ಅವಸರ ಮಾಡದೆ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ಕಳುಹಿಸಿಕೊಟ್ಟು ಸಧ್ಯಕ್ಕೆ ಸದರಿ ಕಾನೂನನ್ನು ತಟಸ್ಥವಾಗಿಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಸನ್ಯಾನ್ಯ ಅಧ್ಯಕ್ಷರೆ, ವಾಹನವನ್ನು ಖರೀದಿಸಿದಾಗ, ಖರೀದಿಸಿದವರ ಹೆಸರು ತನ್ನಷ್ಟಕ್ಕೆ ತಾನೇ ನೋಂದಣಿಯಾಗುತ್ತದೆ. He will become Owner of that vehicle. ಇನ್ನೊಬ್ಬನಿಗೆ ಮಾರಿದಾಗ If he pays the amount, he will become owner. ರಿಜಿಸ್ಟರಿಂಗ್ ಸರ್ಟಿಫಿಕೇಟ್‌ನಲ್ಲಿ ಅಥವಾ ಬೇರೆ ಸರ್ಟಿಫಿಕೇರ್ಟ್‌ನಲ್ಲಿ ಎಂಟ್ರಿ ಮಾಡುವಾಗ it is only consquent to the sale. ವಾಹನ ಖರೀದಿಸಿದವರು ಅದರ ಮಾಲೀಕರಾದ ನಂತರ ಸ್ಟ್ಯಾಂಪ್ ಡ್ಯೂಟಿ ಅಥವಾ ಇನ್ನೊಂದು ರೀತಿಯ ತೆರಿಗೆ ಕೊಡ್ಲಲಿಲ್ಲವೆಂದು ಅವರ ಮಾಲೀಕತ್ವವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ಟ್ಯಾಂಪ್ ಕೊಡಲಿಲ್ಲವೋ ಅಥವಾ ತೆರಿಗೆ ಕೊಡಲಿಲ್ಲವೆಂದರೆ ಮೋಟಾರು ವಾಹನಗಳ ಕಾಯಿದೆಯಲ್ಲಿ ಪ್ರಾವಿಷನ್ ಇದೆ. You can implement that law. You can collect revenue or the stamp as provided under the M.V. Act.

ಆದರೆ, ಈ ಸ್ಟ್ಯಾಂಪ್ ಡ್ಯೂಟಿಯಲ್ಲಿ ತಿದ್ದುಪಡಿ ಬೇಕಾಗಿಲ್ಲ. ಎರಡನೆಯದಾಗಿ, ಈ ತರಹದ ಸ್ಟ್ಯಾಂಪ್ ಡ್ಯೂಟಿ ಕೊಡದೆ ಹೋದರೆ ಅದನ್ನು ಮಾಲೀಕತ್ವದಲ್ಲಿ, ರಿಜಿಸ್ಟರಿಂಗ್ ಸರ್ಟಿಫಿಕೇಟ್‌ನಲ್ಲಿ ಎಂಟ್ರಿ ಮಾಡುವುದಿಲ್ಲವೆಂದರೆ To avoid payment of stamp duty, benemi transactions will be there. ವಾಹನಗಳ ಬೇನಾಮಿ ವ್ಯವಹಾರಗಳು ಜಾಸ್ತಿ ನಡೆಯುತ್ತವೆ. ಆಗ ಒಂದು ವೇಳೆ ಅಂತಹ ವಾಹನವೇನಾದರೂ ಅಪಘಾತಕ್ಕೀಡಾದರೆ ಥರ್ಡ್ ಪಾರ್ಟಿ ಇನ್‌ಷೂರೆನ್ಸ್ ರೆಕವರಿ ಇನ್‌ಷ್ಯೂರೆನ್ಸ್ ಮತ್ತು ಕಾಂಪೆನ್‌ಸೇಷನ್ ಮುಂತಾದ ಸಮಸ್ಯೆಗಳು ಬರುತ್ತವೆ. ಆದುದರಿಂದ, ಈ ತೆರಿಗೆ ಹಾಕಿರುವುದು ಸರಿಯಲ್ಲವೆಂದು ಮಾನ್ಯ ಹಿರಿಯ ಸದಸ್ಯರಾದ ರಾಮಕೃಷ್ಣರವರು ಏನು ಹೇಳಿದ್ದಾರೆ, ಇದನ್ನು ಪರಿಶೀಲಿಸಿ, ಇದರ ಬಗ್ಗೆ ಮೋಟಾರು ವಾಹನಗಳ ಕಾಯ್ದೆಯಲ್ಲಿ ಏನಾದರೂ ಸೂಕ್ತ ಪರಿಶೀಲಿಸಿ, ಇದರ ಬಗ್ಗೆ ಮೋಟಾರು ವಾಹನಗಳ ಕಾಯ್ದೆಯಲ್ಲಿ ಏನಾದರೂ ಸೂಕ್ತ ತಿದ್ದುಪಡಿ ತರಬಹುದೇ ಎಂಬ ಈ ಮೂರು ಸಲಹೆಗಳನ್ನು, ಸದರಿ ಕಾನೂನಿಗೆ ತಿದ್ದುಪಡಿ ಮಾಡುವುದಕ್ಕಿಂತ ಮುಂಚೆ ಗಮನಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

7.00 ಪಿ.ಎಂ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಅಧ್ಯಕ್ಷರೆ, ಅನುಭವವಿರತಕ್ಕ ಮಾನ್ಯ ಸದಸ್ಯರುಗಳಾದ ವೈ. ರಾಮಕೃಷ್ಣರವರು ಮತ್ತು ಶ್ರೀಮತಿ ಪ್ರಮೀಳಾ ನೇಸರ್ಗಿಯವರೇನು ಹೇಳಿದ್ದಾರೆ ಅದನ್ನು ಕೇಳಿದ್ದೇನೆ. ನಾವು ಸೆಕ್ಷನ್ 28(ಎ)ಗೆ ಅಮೆಂಡ್‌ಮೆಂಟ್ ತಂದು ಅದಕ್ಕೆ ಈಗಾಗಲೇ ಈ ಸದನವು ಒಪ್ಪಿಗೆಯನ್ನು ಕೊಟ್ಟಿದೆ. ಆ ಮನೆಯಲ್ಲಿಯೂ ಸಹ ಒಪ್ಪಿಗೆಯನ್ನು ಕೊಡಲಾಗಿದೆ. ಇಲ್ಲಿ ನಾವೇನು ತಂದಿದ್ದೇವೆಂದರೆ the methodology; just to have an enabling section, we have brought this.

ತಾವು ಹಲವಾರು ವಿಚಾರಗಳನ್ನು ಹೇಳಿ ಸ್ಟ್ಯಾಂಪ್ ಪೇಪರ್ ಸಿಕ್ಕುವುದಿಲ್ಲವೆಂದು ಹೇಳಿದ್ದೀರಿ. ಪ್ರತಿಯೊಂದು ಸಬ್ ರಿಜಿಸ್ಟ್ರಾರ್ ಕಛೇರಿಗಳಿಗೂ ಸಹ ಈಗ Franking Machines ಕೊಟ್ಟಿದ್ದೇವೆ ಮತ್ತು ಎಲ್ಲೆಲ್ಲಿ ಆರ್‌ಟಿಓ ಕಛೇರಿಗಳಲ್ಲಿ ಒತ್ತಡ ಜಾಸ್ತಿ ಇರುತ್ತದೆ ಅಲ್ಲಿಗೂ ಸಹ ಇದನ್ನು ಕೊಡುತ್ತೇವೆ. ಮಾನ್ಯ ಪ್ರಮೀಳಾರವರು ಇದು ಸಂವಿಧಾನಕ್ಕೆ ವಿರೋಧವಾಗಿದೆ ಎಂದು ಹೇಳಿದರು. ಮೊನ್ನೆ ದಿವಸ ಇದನ್ನು ಇಂಟರ್‌ಡ್ಯೂಸ್ ಮಾಡುವಾಗಲೆಯೇ ಇದರ ಬಗ್ಗೆ ಹೇಳಿದ್ದೇನೆ. ಮಹಾರಾಷ್ಟ್ರದಲ್ಲಿ ಸೆಕ್ಷನ್ 25ರೊಳಗೆ ಇದನ್ನು ಈಗಾಗಲೇ ಸೇರಿಸಿದ್ದಾರೆ.

Conveyance : On the true market value of the property, which is the subject matter of conveyance, if relating to the moveable property every Rs. 500 or part there of Rs. 15.

ಅವರು ಮೂರು ಪರ್‌ಸೆಂಟ್ ಈಗಾಗಲೇ ಹಾಕಿದ್ದಾರೆ. ಇದನ್ನೆಲ್ಲಾ ನೋಡಿಕೊಂಡೇ ನಾವು ಇದನ್ನು ಮಾಡಿದ್ದುದು. ಎರಡು ದಿವಸಗಳ ಹಿಂದೆ ನೀರಾವರಿ ಯೋಜನೆಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ತೊಡಗಿಸಬೇಕೆಂದು ನಮ್ಮ ಮಾನ್ಯ ಸದಸ್ಯರುಗಳೆಲ್ಲಾ ಹೇಳಿದ್ದಾರೆ. ಇಲ್ಲಿ ನಾವು ಎರಡು ಪರ್‌ಸೆಂಟ್ ತೆರಿಗೆ ಹಾಕುವುದರಿಂದ ಕೆಲವೊಂದು ಕೋಟಿ ರೂಪಾಯಿ ಸರ್ಕಾರಕ್ಕೆ ಬರಬಹುದು. ಪ್ರತಿಯೊಂದು ರೂಪಾಯಿಯೂ ಸಹ ನಮಗೆ ಮುಖ್ಯವಾಗಿರುವಾಗ ವಿಧಿ ಇಲ್ಲದೆಯೇ ಇದನ್ನು ಹಾಕುತ್ತಿದ್ದೇವೆ. ಇವತ್ತು ಬಡವರು ಹೊಟ್ಟೆ ತುಂಬ ಹಿಟ್ಟು ತಿಂದು ಬಾಯಿ ತುಂಬ ಅನ್ನವಾದರೂ ತಿನ್ನಲಿ ಎಂದು ಅಗ್ಗದ ದರದಲ್ಲಿ ಅಕ್ಕಿಯನ್ನು ಕೊಡುತ್ತಿದ್ದೇವೆ. ಕೆಲವು ಯೋಜನೆಗಳಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕಾಗುತ್ತದೆ. ನೀರಾವರಿಗಾಗಿ ನಮಗೆ ಬಹಳ ಹೆಚ್ಚಿನ ಹಣವು ಬೇಕಾಗುತ್ತದೆ. ಇವೆಲ್ಲಾ ಕಾರಣದಿಂದ ನಾವು ಸ್ವಲ್ಪ ಪ್ರಮಾಣದಲ್ಲಿ ಎಂದರೆ ಒಂದು ಲಕ್ಷ ರೂಪಾಯಿಗಳ ವಾಹನವನ್ನು ಮಾರಾಟ ಮಾಡಿದರೆ ನಮಗೆ ಎರಡು ಸಾವಿರ ರೂಪಾಯಿ ಮಾತ್ರ ಕೊಡಬೇಕಾಗುತ್ತದೆ. ಅದು ಹೆಚ್ಚು ಹೊರೆಯಾಗಲಾರದೆಂದು ನಾನು ಭಾವಿಸುತ್ತಿದ್ದೇನೆ. ಆದರೂ ಸಹ ಕಾಂಪ್ರಹೆನ್‌ಸೀವ್ ಆಯಕ್ಟ್‌ನ್ನು ತರುತ್ತಿದ್ದೇವೆ ಆಗ ತಾವುಗಳೆಲ್ಲರೂ ಏನು ಹೇಳಿದ್ದೀರಿ ಅದನ್ನು ಜ್ಞಾಪಕದಲ್ಲಿಟ್ಟುಕೊಂಡು ಅಲ್ಲಿ ಅವಶ್ಯಕತೆ ಬಿದ್ದರೆ ಮುಂದೆ ಇದನ್ನು ಇಟ್ಟುಕೊಳ್ಳಬೇಕೋ ಅಥವಾ ತೆಗೆಯಬೇಕೋ ಎಂಬ ಬಗ್ಗೆ ಯೋಚನೆ ಮಾಡುವುದಾಗಿ ತಮಗೆ ಭರವಸೆಯನ್ನು ಕೊಡುತ್ತೇನೆ. ಈಗಾಗಲೇ 28ನೇ ತಿದ್ದುಪಡಿಯಲ್ಲಿ ತಾವು ಒಪ್ಪಿಗೆಯನ್ನು ಕೊಟ್ಟು ಬಿಟ್ಟಿದ್ದೀರಿ.

ಶ್ರೀ ವೈ. ರಾಮಕೃಷ್ಣ : ತಾವು ಹೇಳಿರುವ ಪ್ರಕಾರ ಒಂದು ವೇಳೆ ಏನಾದರೂ President Assent ಸಿಕ್ಕದಿದ್ದರೆ ಆಗ ನೀವು ನಾವು ಹೇಳಿದ್ದನ್ನು ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಹೇಳುತ್ತೀರಿ. ಆಕಸ್ಮಾತ್ ಕೊಟ್ಟು ಬಿಟ್ಟರೆ ಅದರಲ್ಲಿಯೇ ಹೋಗಲಿ ಎಂದು ತಾವು ಹೇಳುತ್ತೀರಿ. It is a very bad principle ಅನಂತರ ತಮ್ಮ ಕಾರ್ಯಕ್ರಮದ ಬಗ್ಗೆ ಮತ್ತು ತೆರಿಗೆಯನ್ನು ಸಂಗ್ರಹ ಮಾಡುವ ಬಗ್ಗೆ ನಾನು ವಿರೋಧ ಮಾಡಿಲ್ಲ. ಸುಲಭವಾಗಿ ಒಂದು ಮೋಟಾರ್ ವಾಹನಕ್ಕೆ 50 ಇಲ್ಲವೆ 100 ರೂ. ಜಾಸ್ತಿ ಮಾಡಿದರೆ ನಿಮ್ಮ ಹಣ ಪೂರ್ತಿಯಾಗಿ ಬರುತ್ತದಲ್ಲವೇ? ಅದನ್ನು ಬಿಟ್ಟು ತಿದ್ದುಪಡಿಯೇಕೆ ಬೇಕು? ರಾಷ್ಟ್ರಪತಿಗಳ ಹತ್ತಿರ ಒಪ್ಪಿಗೆಗಾಗಿ ಏಕೆ ಹೋಗಬೇಕು? ಬೇರೆ ರಾಜ್ಯಗಳಿಗೆ ನಾವು ಏಕೆ ಕೆಟ್ಟ ಸಂಪ್ರದಾಯವನ್ನು ಹಾಕಿಕೊಡಬೇಕು? ಇದರ ಬಗ್ಗೆ ನಾವು ಹೇಳಿದ್ದೇನೆಯೆ ಹೊರತು not that I am opposing Government revenue.

ಶ್ರೀ ಹೆಚ್.ಎನ್. ನಂಜೇಗೌಡ : ಒಂದೇ ಟ್ರಾನ್ಸ್‌ಫರ್‌ಗೆ ಮಾತ್ರ ತಾನೇ ಇದನ್ನು ಹಾಕುತ್ತಿರುವುದು ?

Sri R.L. Jalappa : All subsequent transfers.

ಶ್ರೀ ಹೆಚ್.ಎನ್. ನಂಜೇಗೌಡ : ಅಂದರೆ, ವರ್ಗಾವಣೆಯಾಗದೆ ವಾಹನವನ್ನು ಓಡಿಸಿಕೊಳ್ಳಲಿ ಎಂದು.

ಶ್ರೀ ಕಾಗೋಡುತಿಮ್ಮಪ್ಪ : ಕೆಲವು ವಾಹನಕ್ಕೆ ವಾಹನದ ಬೆಲೆಯು ಒಂದೇ ವರ್ಷಕ್ಕೆ 50 ಪರ್‌ಸೆಂಟ್ ಕಡಿಮೆಯಾಗುತ್ತದೆ. ಕೆಲವರು ಚೆನ್ನಾಗಿಟ್ಟುಕೊಂಡಿದ್ದರೆ ಚೆನ್ನಾಗಿರುತ್ತದೆ.

ಇನ್‌ಕಮ್ ಟ್ಯಾಕ್ಸ್‌ನವರೇನು ಡಿಪ್ರೀಸಿಯೇಷನ್ ಕಳೆಯುತ್ತಾರೆ ಆ ಪ್ರಕಾರವಾಗಿ ವ್ಯಾಲ್ಯುಯೇಷನ್ ಮಾಡಲು ಬರುವುದಿಲ್ಲ. ಆಗ ಏನಾಗುತ್ತದೆಂದರೆ ಪ್ರತಿಯೊಂದು ವ್ಯಾಲ್ಯುಯೇಷನ್‌ನ ಸಮಯದಲ್ಲಿ ಇನ್‌ಕಮ್ ಟ್ಯಾಕ್ಸ್ ಅಧಿಕಾರಿ ಹೋಗಿ ಡಿಪ್ರೀಸಿಯೇಷನ್ ಕಳೆದು ವ್ಯಾಲುಯೇಷನ್ ಮಾಡಿಕೊಂಡು ಬರಬೇಕಾಗುತ್ತದೆ. It leads to lost of corruption and so many things. How are you going too fix the value because it is a transfer of property. It leads to lot of complications.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾತನಾಡಲು ನನಗೂ ಸಹ ಎರಡು ನಿಮಿಷಗಳ ಕಾಲ ಅವಕಾಶ ಮಾಡಿಕೊಡಿ. ಮಾನ್ಯ ಸಚಿವರು ಬಡವರಿಗಾಗಿ 3 ರೂ. 20 ಪೈಸೆಯಂತೆ ಅಕ್ಕಿಯನ್ನು ಕೊಡುವ ಬಗ್ಗೆ ನಮ್ಮ ಅಭ್ಯಂತರವಿಲ್ಲ, ಅದನ್ನು ನಾವು ಸ್ವಾಗತಿಸುತ್ತೇವೆ. ಇಡೀ ರಾಜ್ಯದಲ್ಲಿ ಬಡವರು, ವಿದ್ಯಾವಂತ ನಿರುದ್ಯೋಗಿಗಳು, ಯುವಕರು, ಯುವತಿಯರು ಅನೇಕ ಸಂಘ ಸಂಸ್ಥೆಗಳಿಂದ, ಸರ್ಕಾರಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಎಸ್‌ಸಿ, ಎಸ್‌ಟಿ ಅಭಿವೃದ್ಧಿ ಕಾರ್ಪೊರೇಷನ್ ಇದೆ. ಅಲ್ಲಿಂದ ಸಾಕಷ್ಟು ಪ್ರಮಾಣದಲ್ಲಿ ವಾಹನಗಳನ್ನು ಕೊಡಿಸಿಕೊಟ್ಟಿದೆ. ಮೈನಾರಿಟಿ ಅಭಿವೃದ್ಧಿ ಕಾರ್ಪೊರೇಷನ್ ಇದೆ, ಇಲ್ಲಿಂದ ಸಹ ಸಾಕಷ್ಟು ಪ್ರಮಾಣದಲ್ಲಿ ನಿರುದ್ಯೋಗಿ ಯುವಕರಿಗೆ ವಾಹನಗಳನ್ನು ಒದಗಿಸಿಕೊಟ್ಟಿದೆ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯ ಅಡಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ವಾಹನಗಳನ್ನು ಒದಗಿಸಿಕೊಟ್ಟಿದ್ದಾರೆ. ಸರ್ಕಾರದಿಂದ ಆರ್ಥಿಕವಾಗಿ ಹಿಂದುಳಿದಿರತಕ್ಕ ಜನರೇನಿದ್ದಾರೆ ಅವರಿಗೆ ಸಾಕಷ್ಟು ಆರ್ಥಿಕವಾದ ಸಹಾಯವನ್ನು ಕೊಟ್ಟು ವಾಹನಗಳನ್ನು ಒದಗಿಸಿಕೊಟ್ಟಿದ್ದಾರೆ. ಈ ರೀತಿ ವಾಹನದ ವರ್ಗಾವಣೆಯ ಮೇಲೆ ತೆರಿಗೆಯನ್ನು ಹಾಕಿರುವುದರಿಂದ ಇವತ್ತು ಒಬ್ಬ ವ್ಯಕ್ತಿಯು ಹೊಸದಾಗಿ ವಾಹನವನ್ನು ತೆಗೆದುಕೊಂಡಾಗ ಅವನು ಸಾಯುವವರೆಗೆ ಆ ವಾಹನವನ್ನು ಎಷ್ಟೊ ಸಲ ಮಲೀಕತ್ವದಲ್ಲಿ ಬದಲಾವಣೆ ಮಾಡಿದಾಗ, ವಾಹನವನ್ನು ಎಷ್ಟು ಸಲ ವರ್ಗಾವಣೆ ಮಾಡುತ್ತೇವೆಯೋ ಅಷ್ಟು ಸಲವೂ ಸಹ ತೆರಿಗೆಯನ್ನು ಕೊಡಬೇಕೆಂದರೆ ಅದು ಸರಿಯಲ್ಲ. ಒಂದು ಭಾರಿ ವಾಹನದ ಮಾಲೀಕತ್ವವನ್ನು ಹೊಂದಲೂ ಸಹ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ನಾವು ಲಾರಿಯನ್ನು ಹೊಂದಬೇಕಾದರೆ 5-6 ಲಕ್ಷ ರೂಪಾಯಿಗಳಲ್ಲಿ ತೊಡಗಿಸಬೇಕಾಗುತ್ತದೆ. ಅದನ್ನು ಬ್ಯಾಂಕ್‌ನಿಂದ, ಖಾಸಗಿ ಸಂಸ್ಥೆಗಳಲ್ಲಿ ಅಥವಾ ಸರ್ಕಾರದಿಂದ ಸಾಲವನ್ನು ಪಡೆದು ವಾಹನವನ್ನು ಮಾಡಿಕೊಂಡಿರಬಹುದು. ಅಂಥಹ ವ್ಯಕ್ತಿ ಕಷ್ಟಕ್ಕೆ ಸಿಕ್ಕಿಕೊಂಡಾಗ, ಆ ವಾಹನವನ್ನು ಮಾರಾಟ ಮಾಡಬೇಕಾದ ಸಮಯ ಬಂದಾಗ ಬಹುಶಃ ನನ್ನ ಅಂದಾಜಿನಲ್ಲಿ 20 ಸಾವಿರವನ್ನು ಕೊಡುವವರಿಂದ 20 ಸಾವಿರ ತೆಗೆದುಕೊಳ್ಳುವವರಿಂದ ಒಟ್ಟು 40 ಸಾವಿರ ರೂಪಾಯಿಗಳನ್ನು ಸಂದಾಯ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅನೇಕ ನಿರುದ್ಯೋಗಿ ಯುವಕ ಮತ್ತು ಯುವತಿಯರು ಉದ್ಯೋಗವನ್ನು

ಮಾಡಿಕೊಳ್ಳುವ ಸಲುವಾಗಿ ಸರ್ಕಾರವೆ ಕಾರ್ಯಕ್ರಮವನ್ನು ಮಾಡಿರುವಾಗ ಮತ್ತೊಂದು ಕಡೆ ಅವರಿಂದ ತೆರಿಗೆಯ ಮೂಲಕ ಹಣವನ್ನು ಸಂಗ್ರಹ ಮಾಡುತ್ತೇವೆಂದರೆ ಇದು ಬಡವರ ಮೇಲೆ ಅದರಲ್ಲಿಯೂ ಸಹ ನಿರುದ್ಯೋಗಿ ಯುವಕರ ಮೇಲೆ ಒತ್ತಡ ಬೀಳುತ್ತದೆ. ಆದ್ದರಿಂದ ಅವರೇನು ಮಸೂದೆಯನ್ನು ತಂದಿದ್ದಾರೆ ಅದನ್ನು ಹಿಂದಕ್ಕೆ ಪಡೆದುಕೊಂಡು ಸಮಗ್ರವಾದಂಥ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ತಂದು ಚರ್ಚೆಗೆ ಅವಕಾಶ ಮಾಡಿಕೊಡುವುದು ಸೂಕ್ತವೆಂದು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆಯನ್ನು ಕೊಡಬಯಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಅಧ್ಯಕ್ಷರೇ, ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಪ್ರತಿ ಜಿಲ್ಲೆಯಲ್ಲಿ ಅರ್ಫಿಷಿಯಲ್ ವ್ಯಾಲುಯರ್ಸ್‌ಗಳನ್ನು ನೇಮಕ ಮಾಡುತ್ತೇವೆಂದು ಭರವಸೆಯನ್ನು ಕೊಡುತ್ತಾರೋ? ಏಕೆಂದರೆ ಇದಕ್ಕೆ ಅಫೀಷಿಯಲ್ ವ್ಯಾಲುಯರ್ಸ್ ಬೇಕಾಗುತ್ತಾರೆ. ವಾಹನಕ್ಕೆ ಬೆಲೆಯನ್ನು ಕಟ್ಟಲು ಯಾರಾದರೂ ಬೇಕಲ್ಲವೇ? ಯಾರ್ಯಾರೋ ಬೆಲೆ ಕಟ್ಟುವುದನ್ನು ನಾವು ಪರಿಗಣನೆ ಮಾಡುವುದಕ್ಕಾಗುವುದಿಲ್ಲ; ಅಪಘಾತದ ವಾಹನಕ್ಕೆ ಬೇರೆ ಬೆಲೆ ಕಟ್ಟಬೇಕಾಗುತ್ತದೆ, ಚೆನ್ನಾಗಿ ವಾಹನವನ್ನಿಟ್ಟು ಕೊಂಡಿರುವುದಕ್ಕೆ ಬೇರೆ ಬೆಲೆ, ಎಂಜಿನ್ ಕೆಟ್ಟು ಹೋಗಿದ್ದರೆ ಅದಕ್ಕೆ ಬೇರೆ ಬೆಲೆ, ಆದ್ದರಿಂದ ಬೆಲೆಯನ್ನು ಕಟ್ಟಲು ವ್ಯಾಲ್ಯುಯರ್ಸ್ ಇರಬೇಕಾಗುತ್ತದೆ. ನಿಮ್ಮ ತೆರಿಗೆಯನ್ನು ಹಾಕುವ ವಿಚಾರಕ್ಕೆ ನಮ್ಮ ವಿರೋಧವಿಲ್ಲ, ಇಲ್ಲಿ after cumbersome process, why do you increase the point of corruption. We are opposed to the increase in the number of points of corruption. ಇದಕ್ಕೆ ಅನುಕೂಲ ಮಾಡಿಕೊಡತಕ್ಕ ವ್ಯವಸ್ಥೆಯಾಗುತ್ತದೆ. ಇದು ದಯವಿಟ್ಟು ಬೇಡಿ, ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ನಿಧಾನವಾಗಿ ತೆಗೆದುಕೊಂಡು ತನ್ನಿ.

Sri R.L. Jalappa : Sec. 28-A has already been approved by this House. We brought it consequent to the budget.

Sri Kagodu Thimmappa : This s a stamp duty.

ಶ್ರೀ ಆರ್.ಎಲ್. ಜಾಲಪ್ಪ : ನಾವು ಇದನ್ನು ಮೆಥಾಡಾಲಜಿಗೆ ಯಾವ ರೀತಿ ಎಂಟ್ರಿ ಮಾಡಬೇಕೆಂದು ತಂದಿದ್ದೇವೆಯೇ ವಿನಹ We are not asking for imposition of 2% which has already been approved.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಅಪ್ರೂವ್ ಮಾಡಿದುದ್ದು ಫೈನಾನ್ಸ್ ಇಲಾಖೆ ತಂದಿರತಕ್ಕ ಸೇಲ್ಸ್ ಟ್ಯಾಕ್ಸ್ ಆಯಕ್ಟಿಗೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು ಇಲ್ಲೇ ಇಂಟ್ರಡ್ಯೂಸ್ ಮಾಡಿದ್ದೇವೆ ಇಲ್ಲಿ ಇನ್ನೊಂದು ಬಿಲ್ ಇದೆ 7-8 ಸೇರಿಸಿದ್ದೇವೆ. ಹೇಗ್ಸ್ ಸೇರಿಸಿದ್ದೇವೆ. ಇದೆಲ್ಲಾ ಸೇರಿಸಿ ಒಪ್ಪಿಕೊಂಡಿದ್ದೀರ. ತಾವೇ ಒಪ್ಪಿಕೊಂಡಿದ್ದೀರಿ ಇದು ಸ್ಟ್ಯಾಂಪ್ ಡ್ಯೂಟಿ.

ಶ್ರೀಮತಿ ಪ್ರೆಮೀಳಾ ನೇಸರ್ಗಿ : ಒಂದು ಸಾರಿ ತಪ್ಪು ಮಾಡಿದರೆ ಅದನ್ನೇ ಒಪ್ಪಿಕೊಳ್ಳಿ ಎಂದು ಹೇಳಿದರೆ ತಪ್ಪು ಸರಿಪಡಿಸುವುದಕ್ಕೆ ನಾವು ಇದ್ದೇವೆಯೋ ಅಥವಾ ತಪ್ಪು ಮಾಡಿದ್ದೇವೆ ಮತ್ತೊಂದು ಸಾರಿ ಮಾಡಿ ಎಂದು ಹೇಳುತ್ತೀರೋ, ತಾವು ಅವಸರ ಅವಸರದಲ್ಲಿ ನಮಗೆ ಬಿಲ್ ಅವತ್ತೇ ಕೊಟ್ಟಿದ್ದೀರಿ ನಾವು ಅವತ್ತೇ ಹೇಳಿದ್ದೇವೆ ಸರ್ಕುಲೇಟ್ ಮಾಡಿದ್ದೇವೆ ಎಂದು ಹೇಳುತ್ತೀರಿ ನೀವು ಅರ್ಜೆಂಟಾಗಿ ನಾವು ಮಾಡಬೇಕೆಂದು ಹೇಳಿದಿರಿ, ಅವಕಾಶ ಕೊಟ್ಟಿದ್ದರೆ ನಾವು ಹೇಳುತ್ತಿದ್ದವು.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೇ ಇದರಲ್ಲಿ ವಿರುದ್ಧವಾಗಿ ಏನೊಂದು ವಿಚಾರ ಇದೆ ಅಂದರೆ ಹಳೇ ವಾಹನಗಳ ಪ್ರದರ್ಶನ ನಡೆಯುತ್ತಿವೆ ಅಷ್ಟೇ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ ನಮ್ಮ ಸಗೀರ್ ಅಹಮದ್ ಹೇಳುತ್ತಿದ್ದರು,. ಕೊಂಡು ಕೊಳ್ಳುವವನು ಹಾಗೂ ಮಾರುವವನು ಕೂಡಬೇಕು ಎಂದು ಅದು ಏನೂ ಇಲ್ಲ. ಒಂದೇ ಸ್ಟ್ಯಾಂಪ್‌ಡ್ಯೂಟೀ ಇಲ್ಲಿ ಬರುವುದು. ಒಬ್ಬನು ವಾಹನ ಒಂದು ಸಾರಿ ಮಾರುತ್ತಾರೆ. ಒಬ್ಬನು ಒಂದು ವಾಹನವನ್ನು 20 ಸಾರಿ ಮಾರುವುದಿಲ್ಲ. ಇನ್ನೊಬ್ಬನೇ ಮಾರುವುದು 'ಎ' ಇವತ್ತು ಮಾರಿದರೆ, 'ಬಿ' ತೆಗೆದುಕೊಂಡು 'ಸಿ' ಗೆ ಮಾರುತ್ತಾನೆ ಅಲ್ಲಿ ನಮಗೆ ಹಣ ಬರುತ್ತದೆ. ವ್ಯಾಲ್ಯುಯೇಷನ್ Valuation, yes, there is some problem. I agree. ಮಾಡಬೇಕೆಂದು ಹೇಳಿ ಈಗ ನಾವು ಗೈಡ್‌ಲೈನ್ಸ್‌ಫಾರ್ ವ್ಯಾಲ್ಯುಯೇಷನ್ ಅದೆಲ್ಲಾ ಕೊಟ್ಟಿದ್ದೇವೆ. ನಾವು ಈವನ್ ಲ್ಯಾಂಡ್‌ಸೇಲ್ ಮಾಡುವಾಗ ಕೂಡ ಗೈಡ್‌ಲೈನ್ಸ ಕೊಟ್ಟಿರುತ್ತೇವೆ, ನಾವು ಇದರಿಂದ ಅಲ್ಲೂ ಕೂಡ ತಮಗೂ ಗೊತ್ತಿದೆ. ಅಲ್ಲೂ ಮೊಸ ನಡೆಯುತ್ತಿದೆ. ಅವರು ಸೆಲ್ಸಡಿಕ್ಲರೇಷನ್ ಕೊಡಿ ಎಂದು ಹೇಳುತ್ತಿದ್ದಾರೆ. ವ್ಯಾಲ್ಯೂಯೇಷನ್‌ಗೆ ನಾವು ಇನ್ನೊಬ್ಬರನ್ನು ಕರೆದು ಒಂದು ವ್ಯಾಲ್ಯೂ ಮಾಡಿ ಎಂದು ಹೇಳುವುದಿಲ್ಲ. ಸೆಲ್ಸ್‌ಡಿಕ್ಲರೇಷನ್ ಇದು 60 ಸಾವಿರ, ಬರುತ್ತದೆ ಅದು ಒಂದು ಲಕ್ಷ ಬೀಳುತ್ತದೆ. 20 ಸಾವಿರ ಬೀಳಿತ್ತದೆ ಎಂದು ಕೊಟ್ಟು ರಿಜಿಸ್ಟರ್‌ಮಾಡಿಸಬೇಕು. ಆದರೆ ನಾನು ಭರವಸೆ ತಮಗೆ ಕೊಡುತ್ತಿದ್ದೇನೆ.

Suppore if it is not workable we are not going to stand on prestige.

ಕಾಂಪ್ರೆಹೆನ್ಸೀವ್ ಬಂದಾಗ ಅಲ್ಲಿಯವರೆಗೆ 3-6 ತಿಂಗಳ ಅನುಭವ ನಮಗೆ ಸಿಗುತ್ತದೆ.

ಶ್ರೀ ಮತಿ ಪ್ರಮಿಳಾ ನೇಸರ್ಗಿ : ಇದು ನಮ್ಮ ಕಾಲದಲ್ಲಿ ಆಗಿಲ್ಲ, ಯಾವಾಗ ಆಯಿತೋ ಗೊತ್ತಿಲ್ಲ, ಇದು ಯಾವಾಗ ಬಂತು ಎಂಬುದನ್ನು ನಮಗೆ ಹೇಳಬೇಕು. ಸೆಷನ್ 52ರ ಕೆಳಗೆ ಯಾವಾಗ ಆಗಿದೆ ಹೇಳಿ ಇದು ಯಾವಾಗ ಆಯಿತು ಎಂಬುದು ಗೊತ್ತಿಲ್ಲ.

ಶ್ರೀ ವೈ. ರಾಮಕೃಷ್ಣ ; ನಾವು ಪ್ರಾಸಂಗಿಕವಾಗಿ ಪ್ರಾಸ್ತಾಪ ಮಾಡಿದೆವು ನಾವೆಲ್ಲಾ ವಿರೋಧ ಮಾಡುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ನಿಮಗೆ ಗೊತ್ತಿಲ್ಲ ಅಂದರೆ ಹೇಗೆ it has been discussed section 28A amendment has been approved..

ಶ್ರೀಮತಿ ಪ್ರಮಿಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ ಇದರ ಒಂದು ಕಾಪಿ ನಮಗೆ ಯಾರಿಗೂ ಸರ್ಕ್ಯುಲೇಟ್ ಆಗಿಲ್ಲ, ಇದು ಒಂದೂ ಖಂಡಿತವಾಗಿ ನಾವು ನೋಡಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೆ, ನೀವು ನೋಡಲಿಲ್ಲ ಅಂದರೆ that is not my mistake.

(ಗೊಂದಲ)

ಶ್ರೀಮತಿ ಪ್ರಮಿಳಾ ನೇಸರ್ಗಿ: ಪ್ರತಿಯೊಂದು ಬಿಲ್ಲನ್ನು ಕೂಡ ನಾವು ಕಣ್ಣು ಇಟ್ಟು ನೋಡುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ತಾವು ಆಗ ವಾಕ್‌ಔಟ್ ಮಾಡಿದ್ದಿರಿ. ಆದ್ದರಿಂದ ತಮ್ಮ ಗಮನಕ್ಕೆ ಬಂದಿಲ್ಲ, ಆ ಬಿಲ್ ಅಪ್ರೂವ್ ಆಗಿದೆ. ಹೆಚ್.ಯು.ಡಿ.ಗೆ ಅಮೆಂಡ್‌ಮೆಂಟ್ ಆಗಿದೆ. ಅಪ್ರೂವ್ ಆಗಿದೆ ಇಲ್ಲಿ ಇದೇ ಹೌಸ್‌ನಲ್ಲಿ ಆಗಿದೆ, ಅವರು ವಾಕ್‌ಔಟ್ ಮಾಡಿದ್ದರು ಎಂದು ಕಾಣುತ್ತದೆ, ಆದರಿಂದ ಅವರ ಗಮನಕ್ಕೆ ಬಂದಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಆಗ ಆಯಿತು ಅಂತೀರಾ, ವಾಕ್‌ಔಟ್ ಮಾಡಿದಾಗ ನೀವು ಇಂಟ್ರಡ್ಯೂಸ್ ಮಾಡಿ ಪಾಸ್ ಮಾಡಿದ್ದೇವೆ ಎಂದು ಹೇಳುತ್ತೀರಾ.

ಶ್ರೀ ಆರ್. ಎಲ್. ಜಾಲಪ್ಪ : ನೀವು ವಾಕ್‌ಔಟ್ ಮಾಡಿದ್ದರೆ ನಾವು ಏನು ಮಾಡೋಣ.?

Mr. Speaker: You please verify, Could there bee a record to establish to the effect that this perticular matter has gone through without the notice of the House , Do you enquirre into it?

ಶ್ರೀಮತಿ ಪ್ರಮಿಳಾ ನೇಸರ್ಗಿ : ನೀವು ಹೇಳುತ್ತಿರುವುದು ನಮ್ಮ ಗಮನಕ್ಕೆ ಬಂದಿಲ್ಲ.

Mr. Speaker: Do you infer so. It could have beeen happened , so many things happen without coming to the individual attention or notice of one or two months But has it come before the House or not is the question .

(ಗೊಂದಲ)

Smt. Pramila Nesargi : We have not discussed it of it were come to own notice, we would have definitely ofiected to it.

ಶ್ರೀ ವೈ. ರಾಮಕೃಷ್ಣ : ನಾವು ವಾಕ್‌ಔಟ್ ಮಾಡಿದುದ್ದು ಇರಬಹುದು ಒಂದು. ಎರಡನೆಯದು it is a taxation bill ನಾನು ಏನು ಹೇಳಬೇಕು ಅದನ್ನು ಹೇಳಲು ಅವಕಾಶ ಕೊಡಬೇಕು.

ಅಧ್ಯಕ್ಷರು : ತಾವು ತಮ್ಮ ವಾದ ಮಂಡನೆ ಮಾಡುವುದಕ್ಕೆ ಮತ್ತು ತಮ್ಮ ಅಭಿಪ್ರಾಯ ಮುಂಡನೆ ಮಾಡುವುದಕ್ಕೆ ನಾನು ಅಡ್ಡ ಬರುವುದಿಲ್ಲ, ನಾನು ಅಗಿನಿಂದ ಸುಮ್ನೆ ವಾಚ್ ಮಾಡುತ್ತಿದ್ದೇನೆ. ನಿಮ್ಮ ಮಾತಿನ ಸರಣಿ ಎಲ್ಲಿಗೆ ಬಂದಿದೆ ಅಂದರೆ ಆ ವಿಷಯ ಇಲ್ಲಿ ಚರ್ಚೆ ಆಗಿಲ್ಲ ಎಂದು ಬಂದಾಗ ಅಲ್ಲಿಗೆ ನಾವು ನಕಲಿ ದಾಖಲೆ ಸೃಷ್ಟಿ ಮಾಡಿದ್ದೇವೆಂದು ಆಯಿತು.

ಶ್ರೀ ವೈ. ರಾಮಕೃಷ್ಣ : ನಮ್ಮ ಬಾಗಕ್ಕೆ ಒಂದು ಕಾಫಿ ಆದರೂ ಕೊಡಬೇಕಾಗಿತಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಇದು ಚರ್ಚೆ ಆಗಿಲ್ಲ ಎಂದು ಹೇಳುವುದಕ್ಕೆ ತಯಾರಾಗಿಲ್ಲ, ಚರ್ಚೆಯಾಗಿದೆ. ಅದು ಸ್ಪಷ್ಟ. ಏಕೆಂದರೆ ಈ ಸದನ ಅಷ್ಟು ತೀರ ಕೆಳ ಮಟ್ಟಕ್ಕೆ ಹೋಗತಕ್ಕಂತಹ ಮಟ್ಟದಲ್ಲಿ ಇಲ್ಲ, ಎಲ್ಲೂ ನಡೆಯುವುದಕ್ಕೆ ಸಾಧ್ಯವಿಲ್ಲ, ನಾವು ಸಾಮಾನ್ಯವಾಗಿ ನಾವು ನೋಡದೆ ಇರಬಹುದು,ನಾವು ಕೇಳದೇ ಇರಬಹುದು. ನಮಗೆ ಬಾರದೇ ಇರಬಹುದು ಏಕೆಂದರೆ ನಾವೆಲ್ಲಾ ಹೊರಗಡೆ ಸಭಾತ್ಯಾಗ ಮಾಡಿರುತ್ತೇವೆ. ಯಾವುದೇ ಪುರಸಭೆ ತರಹ ಮಾತನಾಡುವುದಕ್ಕೆ ಆಗುವುದಿಲ್ಲ.

ಅಧ್ಯಷರು : ಸನ್ಮಾನ್ಯ ವೈ. ರಾಮಕೃಷ್ಣ ಮತ್ತು ಪ್ರಮಿಳಾರವರಿಗೆ ನಾನು ಏನು ಪ್ರಾರ್ಥನೆ ಮಾಡುತ್ತೇನೆ ಅಂದರೆ ತಮ್ಮ ಅಭಿಪ್ರಾಯ ಏನುದೆ ಅದನ್ನು ಎಷ್ಟು ತೀವ್ರವಾಗಿ ತಾವು ವ್ಯಕ್ತ ಮಾಡುವುದಕ್ಕೆ ನಾನು ಅಡ್ಡ ಬರುವುದಿಲ್ಲ, You are within your right ಆ ಒಂದು ಭಾವನೆ ನಿಮ್ಮಲ್ಲಿ ಏನು ವ್ಯಕ್ತವಾಗುತ್ತಿದೆ it is incorrect. I only try to see other things. It is your prerogative, I don't come in your way.

ಶ್ರೀ ಆರ್.ಎಲ್ ಜಾಲಪ್ಪ : ಅದೇ ಅವರು ಪದೇ ಪದೇ ಎಸ್ಕಾಪ್ ಔಟ್‌ಮಾಡುವುದು ಬೇಡ ನೀವು ಹೌಸ್‌ನಲ್ಲಿ ಕುಳಿತುಕೊಂಡರೆ ಗೊತ್ತಾಗುತ್ತದೆ. ದಯವಿಟ್ಟು ಇನ್ನು ಮೇಲಾದರೂ ಹೌಸ್ ನಲ್ಲಿ ಕುಳಿತುಕೊಳ್ಳಿ.

ಶ್ರೀ ವೈ. ರಾಮಕೃಷ್ಣ ; ನಾನು ಸ್ಪಷ್ಟವಾಗಿ ಇವತ್ತು ಅಲ್ಲ ಕಳೆದ ಸುಮಾರು ಅಧಿವೇಶನ ಆದಾಗಿನಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲಾಖೆಯವರಿಗೆ ನಾನು ಹೇಳಿದ್ದೇನೆ. ಅಧ್ಯಾಷರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ ಇದರಿಂದ ಖಂಡಿತವಾಗಿ ಕೂಡ ಹೇಳುತ್ತೇನೆ. we are not going to create a good procedent.

ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ, ಪರಿಶೀಲನೆ ಮಾಡಿ ಮಾಡುವುದಕ್ಕೆ ಆಗುವುದಿಲ್ಲ ಆಂದರೆ ತೊಂದರೆಯಾಗುತ್ತದೆ, ಮತ್ತು ನಾವು ಅನುಸರಿಸತಕ್ಕಂತಹ ರೀತಿ most unconstitutional, undemocractic, irregular.

ಏನೇನು ಪದಗಳು ಡಿಕ್ಷನರಿಯಲ್ಲಿವೆ ಆ ಎಲ್ಲಾ ಪದಗಳನ್ನು ಉಪಯೋಗಿಸಬಹುದು. ನಾನು ನಿಮಗೆ ಆಲ್ಟರ್‌ನೇಟೀವ್ ಸಜೆಕ್ಷನನ್ ಕೊಟ್ಟಿದ್ದೇನೆ, ಅಷ್ಟೇ ಹಣವನ್ನು ಜನರಿಗೆ ನೀವು ಮೋಟಾರ್ ಟ್ಯಾಕ್ಸ್‌ನಲ್ಲಿ ಹಾಕಿ ಏರಕೆ ಅನವಶ್ಯವಾಗಿ ತೊಂದರೆ ಕೊಡುತ್ತೀರಿ? ಇವತ್ತು ಇವರ ಕೈಗೆ ಸರ್ಟಿಫಿಕೇಟ್ ಕೊಡುರ ತನಕ ಆರ್.ಟಿ. ಮಾಡಬಾರದು ಎಂದಿದೆ ಕಠೋರವಾದ ಶಾಸನ ಇದು.

ಶ್ರೀ ಆರ್.ಎಲ್.ಜಾಲಪ್ಪ : ಹಣ ಪಾವತಿ ಯಾಗಿದೆ ಎಂದು ಸ್ಟ್ಯಾಪ್ ಪೇಪರ್ ಮೇಲೆ ಬರೆಸಿಕೊಂಡರೆ ಸಾಕು. ಫ್ರಾಂಕಿಂಗ್ ಮೆಷಿನ್ ಕೊಡುತ್ತೇನೆ ನಾವು. we are not going by valuation..

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಾಕ್ಷರೇ, ಈಗ ಪ್ರಮುಖ ಪ್ರಶ್ನೆ ಇದರಲ್ಲಿ who has to declare.

Sri .R.L.Jalappa : If you say it costs Rs.80,000 we agree I am kassuring on the Floor of the House that this is being collected on your selfËdeclaration. I am also assuring you when we are introducing the Comprehensive Bill and if there are lapese we will try to recitfy.

ಏಕೆ ಆಗುವುದಿಲ್ಲ? ಆ ಮೇಲೆ ಟ್ಯಾಕ್ಸ್ ಹೀಗಮ ಕಲೆಕ್ಟ್ ಮಾಡಬೇಕು, ಸಾಗಮ ಕಲೆಕ್ಟ್ ಮಾಡಬೇಕು ಎಂದು ಹೇಳಿದರೆ ಆಗುವುದಿಲ್ಲ, ಅಲ್ಲಿಂದ ಆಗಬಹುದು ಎಂದು ಹೇಳಿದರೆ ಹೇಗೆ ಆಯಿತು ಇದೆಲ್ಲಾ ಏನೂ ಬೇಕಾಗಿರಲಿಲ್ಲ, ಎಲ್ಲಾ ತಲೆಗಂದಾಯ ಹಾಕಿ ಬಿಡಬಹುದಿತ್ತು. ಆದರೆ ಹಾಗೆ ಮಾಡುವುದಕ್ಕಾಗುವುದಿಲ್ಲ,

ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಾಕ್ಷರೇ ಆ ವ್ಯಾಲ್ಯುಯೇಷನ್ ಮಾಡುವ ವಿಚಾರದಲ್ಲಿ ಅವರು ಏನು Seller and the purchases ಡಿಕ್ಲೇರ್ ಮಾಡುತ್ತಾರೆ that would be the value of the property ಅನ್ನುವುದಾದರೆ that assurance should come into effect - in what manner he is going to translate into action that is all my Concern We are law making body. You must ensure proper guide lines.

Sri R.L.Jalappa: I may be a lay man. There is a Law Department also in our Government with able people. They have gone through all those things and than obn their certification only, we are placing it here.

ಶ್ರೀ ಕಾಗೋಡು ತಿಮ್ಮಪ್ಪ : ವ್ಯಾಲ್ಯುಯೇಷನ್ ಬಗ್ಗೆ ಡಿಕ್ಲೇರೇಷನ ಸಾಕು ಎನ್ನುವುದಾದರೆ, you make an assurance on the floor of the House.

Sri R.L.Jalappa: I have made it already.

Sri Kagodu Thimmappa : are you going to issuee by heans of rule or by a notification.? How are you going to translate it into action.?

Sri R.l.jalappa : We are going to notify it. ಇನ್ನು ಸೆಲ್ಫ ಡಿಕ್ಲೇರೇಷನ್ ಮೇಲೆ suppose even if it costs Rs. 2 lakhs, if they say it costs Rs. 1 lakhs we will agree.

(ಗೊಂದಲ)

ಮಾನ್ಯ ಸದಸ್ಯರೊಬರು : ಒಟ್ಟಿನಲ್ಲಿ ತೆರಿಗೆ ಹಾಕುವುದು ಎಂದು ಹೇಳಿ ಚಮಡಾವನ್ನೇ ಸುಲಿದು ಬಿಸಾಕುವುದು. ವಾಹನ ಮಾಲೀಕರ ಚಮಡಾವನ್ನೇ ಸುಲಿದು ಬಿಡುತ್ತೀರಿ. ಮೂರು ರೂಪಾಯಿಗೆ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದಿರಿ. That is your Commitment. ಹಾಗೆಂದು ಹೇಳಿ ವಾಹನ ಮಾಲೀಕರ ಚಮಡಾವನ್ನೇ ಸುಲಿದು ಬಿಡುವುದೇ?

ಶ್ರೀ ಆರ್.ಎಲ್. ಜಾಲಪ್ಪ ; ಟ್ಯಾಕ್ಸ್ ಹಾಕುವುದು ಬೇಡ ಎನ್ನುವುದಿದ್ದರೆ ತಮ್ಮ ಸರ್ಕಾರ ಬಂದಾಗ ಏನೂ ಟ್ಯಾಕ್ಸ್ ಹಾಕಬೇಡಿ we will be grateful to you.

ಶ್ರೀ ಹೆಚ್.ಎನ್. ನಂಜೇಗೌಡ : ನಾವು ಆಕ್ಟ್ ನಂ. 8 ಆಫ್ 1995 ನಾವು ಅಪ್ರೂವ್ ಮಾಡಿರತಕ್ಕಂಥಾದ್ದು. ಇದರಲ್ಲ ಇವರು ಹೇಳುವುದು 28 (ಎ) ಇದರ ಪ್ರಕಾರ ಟ್ಯಾಕ್ಸ್‌ನ್ನು ಅಪ್ರೂವ್ ಮಾಡಿದ್ದೇವೆ ಎಂದು. ಅದು ಹೇಗೆ ಎಂದು ಅರ್ಥವಾಗಲಿಲ್ಲ. ನೀವು ಓದಿಬಿಟ್ಟು ಹೇಳುತ್ತೀರಾ? ಇದರಲ್ಲಿ ಟ್ಯಾಕ್ಸ್‌ಗೆ ನಾವು ಅಪ್ರೂವ ಮಾಡಿಕೊಟ್ಟಿರುವುದು ಎಲ್ಲಿದೆ ಎಂದು.

we have to intimato ....ಅಧ್ಯಕ್ಷರೇ ನೀವೇ ಓದಿ . Inttimation of transfer of ownership of motor vehicle ..

ಇಂಟೀಮೇಷನ್‌ಗೆ ಸಂಬಂಧಪಟ್ಟಿದ್ದುದು.

Every person applying for transfer of ownership of a motor vehicle under the Motor Vehcles Act, 1988 and who is liable kto pay duty under sub-clause (a) of clause (3) of Article 20 of the Schedule to this Act shall for purposes of charging such duty send intimation of transfer to such authority and in such form as may be prescribed, and shall also furnish a copy of such intimation to the registering kauthority under the Motor Vehicles Act, 1988,..

ಇಷ್ಟು ಇದೆ. ಇದರಲ್ಲಿ ನನಗೆ ಏನೂ ಅರ್ಥವಾಗಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಬಜೆಟ್‌ನಲ್ಲಿ ಷೆಡ್ಯೂಲ್ ನೋಡಿ.

ಶ್ರೀ ಹೆಚ್.ಎನ್. ನಜೇಗೌಡ : ನಾನು ಏನು ಹೇಳುತ್ತಿದ್ದೇನೆ ಎಂದರೆ ಈ ಆಕ್ಟಗೋಸ್ಕರ ಇದನ್ನು ಪಾಸ್ ಮಾಡಿ ಎಂದರೆ ತಪ್ಪಾಗುತ್ತದೆ. ಇದನ್ನು ಪಾಸ್ ಮಾಡಿಕೊಡಿ ಎಂದರೆ ಪ್ರಶ್ನೆ ಬೇರೆ. ಆ ಆಕ್ಟ್ ಪಾಸ್ ಮಾಡಿದ್ದೀರಿ ಅದರಿಂದ ಇದನ್ನು ಪಾಸ್ ನಾಡಬೇಕು ಎಂದರೆ ಆಗುವುದಿಲ್ಲ. That argument dose not hold good.

ಶ್ರೀ ಆರ್.ಎಲ್. ಜಾಲಪ್ಪ : ಪುಟ ಸಂಖ್ಯೆ 117ರಲ್ಲಿ ಮೋಟಾರ್ ವಾಹನಗಳ ಕಾಯಿದೆ 1988ರನ್ವಯ ನೋಂದಾಯಿಸಲಾದ ಮೋಟಾರು ವಾಹನಗಳ ಎರಡನೆ ಮತ್ತು ತದನಂತರದ ಮಾರಾಟಗಳಿಗೆ ಅದಕ್ಕೆ ಇಲ್ಲಿ ಕಾನ್ಸಿಕ್ವೆಂಟ್ ಚೇಂಜನ ತಂದಿರುವುದು.

ಶ್ರೀ ಮಂಜುನಾಥ ಕುನ್ನಾರು : ಮಾನ್ಯ ಅಧ್ಯಕ್ಷರೆ, ಇದನ್ನು ಪ್ರೆಸ್ಟೀಜ್ ಎಂದು ಮಾಡದೆ ಇದು ಸಾಮಾನ್ಯ ಮನುಷ್ಯನ ಹತ್ತಿರ ನಗೆಪಾಟಲಿಗೆ ಈ ದಾಗುವಂಥದ್ದು ಬೇಡ. ಇವತ್ತು ಯಾರೂ ಕಾಯಿದೆ ಪ್ರಕಾರ ಮೋಟಾರನ್ನು ಟ್ರಾನ್ಸ್‌ಫರ್ ಮಾಡುವುದಿಲ್ಲ. ಕ29 ಫಾರಂಗೆ ಸಹಿ ಹಾಕಿಕೊಂಡು ಅಗ್ರಿಮೆಂಟ್ ಕೊಟ್ಟು ವೆಹಿಕಲ್ ಕೊಡುತ್ತಾನೆ. ನಮಗೆ ಇದು ಇಷ್ಟು ಸ್ಪಷ್ಟವಾಗಿ ಗೊತ್ತಿದ್ದರೂ ಕೂಡ ಕಾಯಿದೆಯನ್ನು ಪಾಸ್ ಮಾಡುವುದಿಲ್ಲ ಏನೂ ಅರ್ಥ ಇಲ್ಲ. ಇದನ್ನು ಪ್ರೆಸ್ಟೀಜ್ ಇಷ್ಯ ಎಂದು ತೆಗೆದುಕೊಳ್ಳದೋ ಪರಿಶೀಲನೆ ಮಾಡಿ ಮುಂದೆ ಯೋಗ್ಯ ವಾದಂತಹ ಕಾನೂನನ್ನು ತನ್ನಿ ಇದಕ್ಕೆ ಬೇಕಾದರೆ ರ್ಯಾಷನಲ್ಲಾಗಿ 500 ರೂಪಾಯಿ 250 ರೂಪಾಯಿ ಹಾಕಲಿ. ಈ ರೀತಿಯಾಗಿ ಪರ್ಸೆಂಟೇಜ್ ಹಾಕಿದರೆ ಯಾವುದೇ ಪ್ರಕಾರವಾಗಿ ವೆಹಿಕಲ್‌ನ್ನು ಅನಸ್ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ವೈ. ರಾಮಕೃಷ್ಣ ; ಮಾನ್ಯ ಅಧ್ಯಕ್ಷರೆ, ಇದನ್ನು ನೀವು ಹೇಗೆ ತೆಗೆದುಕೊಳ್ಳುತ್ತೀರಿ? ಈಗ ರಿಜಿಸ್ಟ್ರೇಷನ್ ಫೀಸ್ ಇದೆಯಲ್ಲಾ ಇದನ್ನು ಮೂರು ತಿಂಗಳಿಗೆ ಒಂದು ಸಾರಿ ಕೊಡಬೇಕಲ್ಲಾ ಅದನ್ನು ಜಾಸ್ತಿ ಮಾಡಿಕೊಳ್ಳಿ.ಮಾಡಿಕೊಂಡರೆ ನಮಗೆ ಕಷ್ಟ ತಪ್ಪುತ್ತದೆ. ಮುಗಿಯಿತಲ್ಲಾ.

ಅಧ್ಯಕ್ಷರು: ಅವರು ಏನೋ ಹೇಳುತ್ತಿದ್ದಾರೆ ಆಗಿನಿಂದ ...

ಶ್ರೀ ಆರ್. ಎಲ್. ಜಾಲಪ್ಪ : ಇಲ್ಲಿ ಕ್ಲಿಯರ್ ಆಗಿ ಇದೆ.

In Article 20, after clause (2) following shall be inserted namely,-

(3 If relating to moveable property

(a) If relating to the transfer of ownership of Motor vehicle registered or deemed to have been registered under the Motor vehicles Act, 1988 (Central Act 59 of 1988)

wo rupees for every rupees one hunder or part there of..

It is there in the hill itself..

ಶ್ರೀ ವೈ. ರಾಮಕೃಷ್ಣ : ತಪ್ಪೇನಿಲ್ಲ ಸ್ವಾಮಿ ,ಕನ್ಸಿಕರೇಷನ್‌ಗೆ ಬಂದಿದೆ. ನಾವು ಹೇಳುತ್ತಿದ್ದೇವೆ.

Sri R.L.Jalappa : This is methodology. It is there in the bill. It is incorporated.

ಅಧ್ಯಕ್ಷರು : ಜಾಲಪ್ಪನವರೇ ಅವರು ಸುಮಾರು ಹೊತ್ತಿನಿಂದ ನಿಂತಿದ್ದಾರೆ. ಕುಳಿತೇ ಇಲ್ಲ.

Sri Kagodu Thimmappa : The tax can be collected..

(Interruption)

Sri. R.L. Jalappa : That is adifferent thing. There are so many ways to collect the tax . This is one of the ways. We are charging only a meagre amount. we are charging only 2%.

We are bringing a comprehenisve bill before you. We will see..

ಶ್ರೀ ಕಾಗೋಡು ತಿಮಪ್ಪ : ರಿಜಿಸ್ಟ್ರೇಶನ್ ಫೀಸ್‌ನ್ನು ಎನ್‌ಹಾನ್ಸ್ ಮಾಡಿಕೊಳ್ಳಿ. ಸ್ಟಾಂಪ್ ಡ್ಯೂಟಿ ಏನು ಕಲೆಕ್ಟ್ ಮಾಡುತ್ತೀರಲ್ಲಾ ಅಷ್ಟೇ ಅಮೌಂಟನ್ನು ರಿಜಿಸ್ಟ್ರೇಷನ್ ಪೀಸ್ ಎಂದು ಎನ್‌ಹ್ಯಾನ್ಸ್ ಮಾಡಿಕೊಳ್ಳಿ.

Sri R.L. Jalappa ; That is a different thing. There are so many methods of collecting the taxes.

ಅಧ್ಯಕ್ಷರೇ : ಕಾಗೋಡು ತಿಮಪ್ಪನವರಿಗೆ ಒಳ್ಳೆಯ ಐಡಿಯಾಸ್‌ಗಳು ಇವೆ ಆದರೆ ಆ ಕಡೆಗೆ—ಹೋಗಿ—ಕುಳಿತು ಬಿಟ್ಟಿದ್ದಾರೆ.

ಶ್ರೀ ವೈ. ರಾಮಕೃಷ್ಣ : ನೀವು ಲಾ ಡಿಪಾರ್ಟಮೆಂಟ್, ರೆವಿನ್ಯೂ ಡಿಪಾರ್ಟಮೆಂಟ್ ಕುಳಿತು ಕೊಂಡು ಆಲೋಚನೆ ಮಾಡಿದ್ದೀರಿ. ಇದು ಕಾನ್ಸಿಟಿಟ್ಯೂಷನ್ ಪ್ರಕಾರ ಕನ್‌ಕರೆಂಟ್ ಲಿಸ್ಟಿಗೆ ಬರುತ್ತದೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಬೇರೆ ಕಡೆ ಯೋಚನೆ ಮಾಡಿ 140 ರೂಪಾಯಿ ಜಾಸ್ತಿಯಾಯಿತು ಎಂದು ಅದಕ್ಕೇನೇತಾವೆಲ್ಲರೂ

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಸೆಲ್ಫ್ ಡಿಕ್ಲರೇಷನ್ ಮೇಲೆ ನಾವು ಸ್ಟಾಂಪ್ ಡ್ಯೂಟಿ ತೆಗೆದುಕೊಳ್ಳುತ್ತೇವೆ. It is there in entry 35. It is in the concurrent list....

ಅಧ್ಯಕ್ಷರು : ಆಯಿತಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಡೈರೆಕ್ಟ್ ಟ್ಯಾಕ್ಸಗೂ, ಇಂಡೈರೆಕ್ಟಟ್ಯಾಕ್ಸ್‌ಗೂ ವೈತ್ಯಾಸ ಇದೆ. ನಾವು ಯಾವುದು ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡಿ ತೆಗೆದು ಕೊಳ್ಳಬೇಕಾದ್ದನ್ನು ಸರ್ಕಾರ ಯೋಚನೆ ಮಾಡಬೇಕು. ಅದು ಬಿಟ್ಟು ಮೊನ್ನೆ ಮಿನಿಕ್ಯಾಬ್ಸಗ ಹಾಕಿದ್ದುದು ಜಾಸ್ತಿಯಾಯಿತು ಎಂದು ಸ್ಟೈಕ್ ಮಾಡಿದರು. ಇದನ್ನೂ ಅದಕ್ಕೆ ಸೇರಿಸಿದರೆ. ಇನ್ನೂ ಏನಾಗುತ್ತಿತ್ತು ಎಂಬುದನ್ನು ಯೋಚನೆ ಮಾಡಿ. ಒಂದು ವೆಹಿಕಲ್‌ನ್ನು ಒಬ್ಬ ಒಂದೇ ಸಾರಿ ಮಾರುವುದು. ಮೂರು ನಾಲ್ಕು ಸಾರಿ ಮಾರುವುದಿಲ್ಲ. ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕು ಎಂದು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ಈ ವರ್ಷ ತಾವು ಏನು ಹೆವಿ ಅಮೌಂಟ್ 250 ಕೋಟಿ ರೂಪಾಯಿ ಏನು ಹಾಕಿದ್ದೀರಿ ಅದನ್ನು ಈ ಸ್ಟಾಂಪ್‌ನಲ್ಲಿ ವಸೂಲು ಮಾಡಬಹುದಲ್ಲಾ. ಇದನ್ನು ಒಪ್ಪಿಕೊಂಡರೆ ...

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ - ಇದನ್ನು ಮೋಟಾರ್ ವೆಹಿಕಲ್ ಟ್ಯಾಕ್ಸ್‌ಗೆ ಸೇರಿಸಿಬಿಡಿ ಎಂದು ಹೇಳುತ್ತಿದ್ದೀರಿ. ನಾನು ಅದನ್ನು ಹೇಳುತ್ತಿಲ್ಲ. ನಾವು ಹೇಳುತ್ತಿದ್ದೀರಿ ಎಲ್ಲಾ ಒಂದೇ ಸಾರಿ ವಸೂಲು ಮಾಡಬಹುದು ಎಂದು.

ಶ್ರೀ ವೈ ರಾಮಕೃಷ್ಣ : ಕೋರ್ಟಿನವರಾದರೂ ಒಪ್ಪಬೇಕಲ್ಲಾ.

Sri R.L. Jalappa : Wether it will stand the test of law we will see. what is there, we don't lose anything..

ಶ್ರೀ ಕಾಗೋಡು ತಿಮಪ್ಪ - ಕಾರಿನಲ್ಲಿ ಹೋಗುತ್ತಾ ಹೋಗುತ್ತಾ ನಿಮ್ಮ ಮನೆ ಹಾಳಾಗಿ ಹೋಗಲಿ ಎಂದು ಬಯ್ದುಕೊಂಡು ಹೋಗುತ್ತಾರೆ ಜನ.

ಶ್ರೀ ವೈ. ರಾಮಕೃಷ್ಣ ; ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರೂ ಜನರಿಗೆ ಕಷ್ಟ ಕೊಟ್ಟು ಅವರ ಹತ್ತಿರ ಟ್ಯಾಕ್ಸ್ ತೆಗೆದುಕೊಂಡು ಅವರ ಟೈಂ ವೇಸ್ಟ್ ಮಾಡಲು. ಹೋಗುತ್ತಿದ್ದಾರೆ ಒಂದು ಸಂಪೂರ್ಣವಾದ ಕರಾಳ ಶಾಸನ ಇದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ. ನಾವು ಸಭ್ಯಾತ್ಯಾಗ ಮಾಡುತ್ತೇನೆ.

(ಆ ಹಂತದಲ್ಲಿ ಮಾನ್ಯ ಬಿಜೆಪಿ ಸದಸ್ಯರೆಲ್ಲರೂ ಈ ವಿಧೇಯಕವನ್ನು ವಿರೋಧಿಸಿತ್ತಾ ಸಭ್ಯಾತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾರ ಏನೆಂದರೆ,

"1995ರ ಕರ್ನಾಟಕ ಸ್ಟಾಂಪ್‌ಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂದ 2

ಅಧ್ಯಕ್ಷರು : "ಖಂದ 2 ಈ ವಿಧೇಯಕದ ಅಂಗವಾಗುರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂದ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂದ 1 ಇತ್ಯಾದಿ

ಅಧ್ಯಕ್ಷರು :ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂದ, ದೀರ್ಘ ಶೀರ್ಷಿಕೆ. ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕರ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂದ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೆಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ಎಲ್. ಜಾಲಪ್ಪ : (ಕಂದಾಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ಸ್ಟಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"1995ರ ಕರ್ನಾಟಕ ಸ್ಟ್ಯಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾರ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಇನ್ನು ಒಂದೆರಡು ಬಿಲ್‌ಗಳಿವೆ, ಅವುಗಳನ್ನು ಮುಗಿಸಿಬಿಡೋಣ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಿಮಗಾದರೂ ನಮ್ಮ ಮೇಲೆ ಕರುಣೆ ಬೇಡವೇ ನಾವು ಬೆಳಿಗ್ಗೆ 9.30ಗಂಟೆಗೆ ಬಂದಿದ್ದೇವೆ. ದಯಮಾಡಿ ತಾವು ನಮಗೆ ರಕ್ಷಣೆಯನ್ನು ಕೊಡಬೇಕು. ಎರಡು ಮಸೂದೆಗಳು ಪಾಸ್ ಆಗದಿದ್ದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ, ತಾವು ಯೋಚನೆ ಮಾಡಿ.

ಅಧ್ಯಕ್ಷರು : ತಾವು ನನ್ನ ಜೊತೆಯಲ್ಲಿ ಇಷ್ಟೇ ಸಹಕರಿಸಿದ್ದೀರಿ. ಇನ್ನು ಎರಡು ಬಿಲ್‌ಗಳಿವೆ ಅದನ್ನು ಮುಗಿಸಿ ಬಿಡೋಣ. ಇನ್ನು ನಾನು ನಿಮಗೆ ಧನ್ಯವಾದಗಳನ್ನು ಹೇಳಬೇಕು. ನಂತರ ನಾವಿಬ್ಬರೂ ಕೂಡಿ ಎಲ್ಲಿಗೋ ಹೋಗುವ ಕಾರ್ಯಕ್ರಮ ಬೇರೆ ಇದೆ., ಜೊತೆಯಲ್ಲಿ ಹೋಗೋಣ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾವು ಎಲ್ಲಿಗೆ ಸ್ವಾಮಿ ಹೋಗುವುದು.? ಇವತ್ತು ಮಾನ್ಯ ಜೆ.ಹೆಚ್. ಪಾಟೀಲರವರು ಸಭೆಗೆ ಬಂದಿರುವುದು ನನಗೆ ಸಂತೋಷವಾಗಿದೆ., ಇವರು ಎಲ್ಲಿಗೆ ಹೋದರೆಂಬುದೇ ನನಗೆ ದೊಡ್ಡ ಸಮಸ್ಯೆಯಾಗಿತ್ತು. ಏಕೆಂದರೆ ತಮಗೇನಾದರೂ ಗೊತ್ತಿತ್ತೇ?

ಅಧ್ಯಶ್ರರು ; ನಾವು ಮೊನ್ನೆ ಅಲೋಚನೆ ಮಾಡಬೇಕೆಂದು ಅಂದುಕೊಂಡ ವಿಚಾರ.

ಶ್ರೀ ವಾಟಾಳ್ ನಾಗರಾಜ್ : ಮೊನ್ನೆ ಇಲ್ಲಿ ಮಹಿಳಾ ಆಯೋಗದ ಬಗ್ಗೆ ಅಮೂಲ್ಯವಾದಂತಹ ಚರ್ಚೆ ನಡೆದಾಗ ತಾವು ಇಲ್ಲಿ ಇರಲಿಲ್ಲ, ತಾವು ಇಲ್ಲಿ ಇಲ್ಲದೇ ಇದ್ದ ಕಾರಣ ನೀವು ಬಂದ ಮೇಲೆ ತೀರ್ಪು ಕೋಡುತ್ತೇನೆಂದು ಅಧ್ಯಕ್ಷರು ಹೇಳಿದ್ದರು. ಅಧ್ಯಕ್ಷರೇ ತೀರ್ಪು ಎನೆಂದು ತಾವು ಹೇಳಿ.

ಅಧ್ಯಕ್ಷರು : ಇಲ್ಲಿ ಮಹಿಳಾ ಆಯೋಗದ ಅಧ್ಯಕ್ಷರು ಯಾರು ಆಗಬೇಕೆಂಬುದು ಸಮಸ್ಯೆಯಾಗುದೆ.

ಒಬ್ಬ ಮಾನ್ಯ ಸದಸ್ಯರು ; ಮಹಿಳಾ ಆಯೋಗಕ್ಕೂ ಜೆ.ಹೆಚ್. ಪಟೇಲರಿಗೂ ಏನು ಸಂಬಂಧ?

7.30 ಪಿ.ಎಂ.

ಅಧ್ಯಕ್ಷರು : ಮೊನ್ನೆ ಮಹಿಳಾ ಸದಸ್ಯರೊಬ್ಬರು ಮಹಿಳಾ ಆಯೋಗಕ್ಕೆ ಮಹಿಳೆಯರೇ ಅಧ್ಯಕ್ಷರಾಗಬೇಕೆಂದು ಏನಿಲ್ಲ, ಮಹನೀಯರು ಬೇಕಾದರೂ ಆಗಬಹುದೆಂದು ಹೇಳಿದರು. ಅದಕ್ಕೆ ನಾನು ಮಾನ್ಯ ವಾಟಾಳ್ ನಾಗರಾಜ್ ಅವರನ್ನು ಅಧ್ಯಕ್ಷಸ್ಥಾನಕ್ಕೆ ಅಲೋಚನೆ ಮಾಡೋಣವೆಂದ ಹೇಳಿದೆ. ಅದಕ್ಕೆ ಅವರು ಪ್ರಾರಂಭದ ಹಂತದಲ್ಲಿ ಆಗುವುದಿಲ್ಲವೆಂದು, ನನಗೆ ನೀವು ಹತ್ತು ಕೋಟಿ ರೂ.ಗಳನ್ನು ಕೊಟ್ಟರೂ ನಾನು ಒಪ್ಪುವುದಿಲ್ಲವೆಂದು. ಹೇಳಿದರು. ಮಾನ್ಯ ನಾಗೇಗೌಡರು ಮತ್ತು ಬಂಗಾರಪ್ಪನವರು ಮತ್ತಿತ್ತರೂ ಒತ್ತಾಯ ಮಾಡುತ್ತಿದ್ದಾರೆ. ನೀವು ಬಲವಂತ ಮಾಡಿದರೆ ಆಗಬಹುದೆಂದು ಹೇಳಿದರು. ನಾನು ಅದಕ್ಕೆ ಹಾಗೆ ಏಕಾಮಿಕಿ ಮಾಡುವುದಕ್ಕಾಗುವುದಿಲ್ಲ, ಮಾನ್ಯ ಪಟೇಲ್‌ರವರಿ ಈ ದಿವಸ ಸದನಕ್ಕೆ ಬಂದಿಲ್ಲ, ಅವರ ಜೊತೆಯಲ್ಲಿ ಚರ್ಚೆ ಮಾಡಿ ಹೇಳುತ್ತೇನೆಂದು ಹೇಳಿದೆ. ತಮಗೆ ಆರೋಗ್ಯ ಸರಿ ಇರಲಿಲ್ಲ, ನಾನು ತಮ್ಮನ್ನು